ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ



**ರಾಜಸ್ಥಾನ:** ರಾಮಗಂಜ್ ಮಂಡಿಯ ಪ್ರವಾಹ ಪೀಡಿತ ಪ್ರದೇಶಗಳಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸ್ವಯಂಸೇವಕರು ಸಂತ್ರಸ್ತ ಕುಟುಂಬಗಳಿಗೆ ಆಹಾರ, ಕುಡಿಯುವ ನೀರು ಮತ್ತು ದೈನಂದಿನ ಅಗತ್ಯ ವಸ್ತುಗಳನ್ನು ಒದಗಿಸಿದರು.

ಸಂಪುಟ : 47 ಸಂಚಿಕೆ : 07 ಶ್ರಾವಣ–ಭಾದ್ರಪದ ಕಲಿಯುಗಾಬ್ದ 5127 01–08–2025 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4

# ಆತ್ಮನಿರ್ಭರತೆಯೇ ವಿಕಸಿತ ಭಾರತ 2047ಗೆ ಮುನ್ನುಡಿ

■ **ಕಿರಣ್ ಕುಮಾರ್ ವಿವೇಕವಂಶಿ**

ಪ್ರಸ್ತುತ ಭಾರತ ಅಮೃತಕಾಲದಲ್ಲಿದೆ. ವಿಕಸಿತ ಭಾರತದ ಗುರಿಯನ್ನು ಹೊತ್ತು ಸ್ವಾತಂತ್ರ್ಯಪ್ರಾಪ್ತಿಯ ನೂರರ ವಸಂತದ ಸಂದರ್ಭ ಎಂದರೆ 2047ರ ಹೊತ್ತಿಗೆ ಜಾಗತಿಕ ನಾಯಕನಾಗುವುದರೆಡೆಗೆ ದಾಪುಗಾಲನ್ನಿರಿಸುತ್ತಿದೆ. ಸ್ವಾತಂತ್ರ್ಯ ಸಂಗ್ರಾಮದ ಹೊಸ್ತಿಲಲ್ಲಿ ಅನೇಕರು ವಿಕಸಿತ ಭಾರತದ ಕನಸ್ಸು ಕಂಡಿದ್ದರು, ಮುಂದೆ ಸ್ವಾತಂತ್ರ್ಯಾ ನಂತರದಲ್ಲಿ ಬಂದ ಸರ್ಕಾರಗಳು ಇದರ ಸಾಕಾರಕ್ಕಾಗಿ ಅತಿಯಾಗಿ ಶ್ರಮಿಸಿವೆಯಾದರೂ ಬದ್ಧತೆಯ ಕೊರತೆಯೋ, ವೈಯಕ್ತಿಕ ಲಾಲಾಸೆಯೋ ಗುರಿಯೆಡೆಗಿನ ಕಾರ್ಯ ಆಮೆಗತಿಯಲ್ಲಿ ಸಾಗಿತ್ತು. ಕಳೆದ ಒಂದು ದಶಕದಿಂದ ಇದಕ್ಕೆ ಚಿರತೆಯ ವೇಗ ದೊರೆತಿದೆ. 2047ರವರೆಗಿನ ಗುರಿಯನ್ನು ಯಾವೆಡೆಗೆ ಇಡಬೇಕಿದೆ ಎನ್ನುವುದರ ಮಾರ್ಗಸೂಚಿ ತಯಾರಿದೆಯಾದರೂ ಬದಲಾಗುತ್ತಿರುವ ಜಾಗತಿಕ ವಿದ್ಯಮಾನಗಳ ಹಿನ್ನೆಲೆಯಲ್ಲಿ ಸಾಗುವ ಹಾದಿಯ ಅವಲೋಕನ ಈ ಕ್ಷಣದ ಅಗತ್ಯತೆ.

**ಬಡತನ ನಿರ್ಮೂಲನೆಗೆ ಒತ್ತು:** ಈ ದೇಶದ ಮೂಲಭೂತ ಸಮಸ್ಯೆ ಎಂದು ಅಮೃತಕಾಲದವರೆಗೂ ನಮ್ಮ ಪತ್ಯದಲ್ಲಿ ಓದಿಕೊಂಡು ಬಂದ ಸಮಾನ್ಯ ಸಂಗತಿ ಬಡತನ. ಹಿಂದೆಯಿಂದಲೂ ಗರೀಬಿ ಹಠಾವೋ ಎಂದು ಪ್ರಯತ್ನಗಳಾದವಾದರೂ ಬಡತನ ನಿರ್ಮೂಲನೆ ಸಾಧ್ಯವಾಗಲಿಲ್ಲ. 2011–12ರಲ್ಲಿ ಬಡತನ ಸೂಚ್ಯಾಂಕ 16.2%ರಷ್ಟಿದ್ದು, 2022–23ರಲ್ಲಿ ಇದರ ಪ್ರಮಾಣ 2.3%ರಷ್ಟಕ್ಕೆ ಇಳಿಕೆ ಕಂಡಿತು. ಹಸಿವಿನ ಪ್ರಮಾಣದಲ್ಲೂ ಇಳಿಕೆ ಕಂಡಿದ್ದು 81ಕೋಟಿ ಜನ ಉಚಿತ ಆಹಾರ ಧಾನ್ಯಗಳನ್ನು ಪಡೆಯುತ್ತಿದ್ದಾರೆ. 15 ಕೋಟಿ ಮನೆಗಳಿಗೆ ನಲ್ಲಿ ನೀರು, ಪಿಎಂ ಆವಾಸ್ ಯೋಜನೆಯಲ್ಲಿ 4 ಕೋಟಿಗೂ ಅಧಿಕ ಮನೆ, 12 ಕೋಟಿ ಶೌಚಾಲಯ ನಿರ್ಮಾಣ, 68 ಲಕ್ಷ ಬೀದಿಬದಿ ವ್ಯಾಪಾರಿಗಳಿಗೆ ಸಾಲ ಸೌಲಭ್ಯ, ಪರಿಶಿಷ್ಟರಿಗೆ 14,700 ಕೋಟಿಗೂ ಅಧಿಕ ಸಾಲ ಸೌಲಭ್ಯ, 10.33 ಕೋಟಿಗೂ ಅಧಿಕ ಎಲ್‌ಪಿಜಿ ಗ್ಯಾಸ್ ಸಂಪರ್ಕ ಒದಗಿಸುವ ಮೂಲಕ ಬಡವರನ್ನು ಮೇಲೆತ್ತುವ ಪ್ರಯತ್ನ ಮಾಡಿದೆ. ಇಡಬ್ಲ್ಯೂಎಸ್ ಮೀಸಲಾತಿ ಈ ನಿಟ್ಟಿನ ದಿಟ್ಟ ಹೆಜ್ಜೆಯಲ್ಲಿ ಒಂದು. ವೃತ್ತಿಪರರಿಗೆ ಹಾಗೂ ಕಾರ್ಮಿಕರಿಗೆ ಸಹಕಾರ ನೀಡಲಾಗುತ್ತಿದೆ. ಆದಾಗ್ಯೂ ಗ್ರಾಮೀಣ ಕುಶಲಿಗರಿಗೆ ಹೆಚ್ಚಿನ ಅವಕಾಶ, ಯುವ ಕೃಷಿಕರಿಗೆ ಪ್ರೋತ್ಸಾಹ, ದುಡಿಯುವ ಕೈಗಳಿಗೆ ಉದ್ಯೋಗ, ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಆದ್ಯತೆಯ ಅಗತ್ಯವಿದೆ.

**ರೈತರ ಆದಾಯ ದ್ವಿಗುಣ:** ಶಾಸ್ತ್ರಿಯವರು ಪ್ರಧಾನಿಯಾಗಿದ್ದಾಗ ಭಾರತ ಆಹಾರ ಧಾನ್ಯಗಳಿಗಾಗಿ ಪರದಾಡಿದ್ದು ಗೊತ್ತಿರುವ ಸಂಗತಿ. ಅದರಿಂದ ಹೊರಬರಲು ನಡೆದ ಪ್ರಯತ್ನಗಳು ಶ್ಲಾಘನೀಯವೂ ಹೌದು. ನಂತರದಲ್ಲಿ ನಡೆದ 'ಹಸಿರು ಕ್ರಾಂತಿ' ಭಾರತದ ಕೃಷಿ ಉತ್ಪಾದನೆಯಲ್ಲಿ ಬೆಳವಣಿಗೆ ತಂದರೂ ರೈತರು ಸ್ಥಿತಿವಂತರಾಗಲು ಸಾಧ್ಯವಾಗಿರಲಿಲ್ಲ. ಆದರೆ 2013–14ಕ್ಕೆ ಹೋಲಿಸಿದರೆ 2024–25ರಲ್ಲಿ ಕೃಷಿ ಬಜೆಟ್ ಬರೊಬ್ಬರಿ ಐದು ಪಟ್ಟು ಹೆಚ್ಚಳಗೊಂಡಿದೆ. 11ಕೋಟಿಗೂ ಅಧಿಕ ರೈತರಿಗೆ ವಾರ್ಷಿಕ □6000/–, ಐತಿಹಾಸಿಕ ಬೆಂಬಲ ಬೆಲೆ ಏರಿಕೆ, ಬೆಳೆ ವಿಮೆ ಸೌಲಭ್ಯ ಸೇರಿದಂತೆ ಕೃಷಿಯಲ್ಲಿ ಹೊಸ ಕ್ರಾಂತಿಯಾಗಿದೆ. ಕೃಷಿಯನ್ನು ತಂತ್ರಜ್ಞಾನದೊಂದಿಗೆ ಸಂಪರ್ಕಿಸುವ ಯೋಜನೆಗಳು ಹೆಚ್ಚುತ್ತಿವೆ. ಈ ಕಾರಣಗಳಿಂದ ಆಹಾರ ಧಾನ್ಯಗಳ ಉತ್ಪಾದನೆ 265 ಮಿಲಿಯನ್ ಮೆಟ್ರಿಕ್ ಟನ್‌ನಿಂದ 374 ಮಿಲಿಯನ್ ಮೆಟ್ರಿಕ್ ಟನ್ (2015ರಿಂದ 2025ರವರೆಗೆ) ತಲುಪಿದೆ. ಸೌರ ವಿದ್ಯುತ್ ಉತ್ಪಾದನೆ ಹೆಚ್ಚಿದೆ. ಕ್ಷೀರ ಕ್ರಾಂತಿಯಲ್ಲಿ ಭಾರತ ಮತ್ತೊಂದು ಮೈಲಿಗಲ್ಲು ಸ್ಥಾಪಿಸಿದ್ದು, 146 ಮಿಲಿಯನ್ ಟನ್‌ನಿಂದ 239 ಮಿಲಿಯನ್ ಟನ್ (63.56%)ಗೆ ಏರಿಕೆ ಕಂಡಿದೆ. ಎಥನಾಲ್ ಪೂರೈಕೆ 441 ಕೋಟಿ ಲೀಟರ್‌ನಷ್ಟು ಹೆಚ್ಚಾಗಿದೆ. ಇಂದು ಭಾರತ ಸಿರಿಧಾನ್ಯಗಳನ್ನು ಬೆಳೆವ ಹಾಗೂ ಬಳಸುವ ಜಗತ್ತಿನ ಅತಿದೊಡ್ಡ ರಾಷ್ಟ್ರ. 9.03 ಬಿಲಿಯನ್ ಡಾಲರ್‌ನಷ್ಟು ಸಂಸ್ಕರಿಸಿದ ಆಹಾರ ಉತ್ಪನ್ನಗಳನ್ನು ಭಾರತ ರಫ್ತು ಮಾಡುತ್ತದೆ. 20 ಸಾವಿರ ಹೊಸ ಸಹಕಾರಿ ಸಂಘಗಳು, 7.1 ಸಾವಿರ ಡೈರಿಗಳು ಕಾರ್ಯಾರಂಭಗೊಂಡಿವೆ. ಮೊದಲ ರಾಷ್ಟ್ರೀಯ ಸಹಕಾರಿ ವಿವಿ ತ್ರಿಭುವನದಾಸ್ ಪಟೇಲ್ ವಿವಿಯನ್ನು




ಸ್ಥಾಪಿಸಲಾಗಿದೆ. ವಿಶ್ವದ ಅತಿದೊಡ್ಡ ಧಾನ್ಯ ಸಂಗ್ರಹಣಾ ಯೋಜನೆಗೆ ಭಾರತ ನಾಂದಿ ಹಾಡಿದೆ.

ಕೃಷಿಯನ್ನು ಲಾಭದಾಯಕ ಕ್ಷೇತ್ರವಾಗಿಸಲು ಈಗಿರುವ ಪ್ರಯತ್ನಗಳು ಸಾಕಾಗುತ್ತಿಲ್ಲ. ಮಳೆ ಜೊತೆಗಿನ ಜೂಜಾಟ ಕೃಷಿಕರನ್ನು ಹೈರಾಣಾಗಿಸಿದ್ದು, ಕೃಷಿ ಕಾರ್ಮಿಕರ ಸಂಖ್ಯೆಯೂ ಗಣನೀಯ ಇಳಿಕೆ ಕಂಡಿದೆ. ತಂತ್ರಜ್ಞಾನ ಆಧಾರಿತ ವ್ಯವಸಾಯಕ್ಕೆ ರೈತರನ್ನು ಸಜ್ಜುಗೊಳಿಸುವುದು, ಯುವಕರನ್ನು ಕೃಷಿಗೆ ಪ್ರೋತ್ಸಾಹಿಸುವುದು, ಕೃಷಿಯಲ್ಲಿ ಹೆಚ್ಚು ಸಂಶೋಧನೆಗಳು ನಡೆಯುವುದು, ರೈತರ ಬದುಕು ಸುಧಾರಿಸುವುದು, ವೈಜ್ಞಾನಿಕ ರೀತಿಯಲ್ಲಿ ಬೇಸಾಯ ಮಾಡುವುದು, ರೈತರನ್ನು ಪ್ರಜ್ಞಾವಂತರನ್ನಾಗಿಸುವುದು ಅತ್ಯಂತ ಮುಖ್ಯ. ಕೃಷಿಯ ಉತ್ಪನ್ನಗಳ ಮೌಲ್ಯವರ್ಧನೆ ವಿಶೇಷ ಚಿಂತನೆಯ ಅಗತ್ಯವೂ ಇದೆ.

**ನಾರಿಶಕ್ತಿ:** ಭಾರತದಲ್ಲಿ ಮೊದಲ ಬಾರಿಗೆ ಪ್ರತಿ ಸಾವಿರ ಪುರುಷರಿಗೆ 1,020 ಮಹಿಳೆಯರ ಲಿಂಗಾನುಪಾತ (ಓಈಊಖ–5) ಬಂದಿದೆ. ಹೆರಿಗೆಯ ವೇಳೆ ತಾಯಂದಿರ ಮರಣ ಕಡಿಮೆಯಾಗಿದೆ. ದೇಶದಲ್ಲಿ 90 ಲಕ್ಷಕ್ಕೂ ಅಧಿಕ ಗುಂಪುಗಳಲ್ಲಿ 10 ಕೋಟಿ ಮಹಿಳೆಯರನ್ನು ಸಂಘಟಿಸಲಾಗಿದೆ. ನಾಯಕತ್ವದಲ್ಲೂ 33% ಮಹಿಳೆಯರ ಸಹಭಾಗಿತ್ವಕ್ಕೆ ಅವಕಾಶ ಮಾಡಿಕೊಡಲಾಗಿದೆ. ಸಶಸ್ತ್ರ ಪಡೆಗಳಲ್ಲಿ, ರಕ್ಷಣಾ ಸೇವೆಗಳಲ್ಲಿ, ಸೈನಿಕ ಶಾಲೆಗಳಲ್ಲಿ ಈಗ ಹೆಣ್ಣುಮಕ್ಕಳಿಗೂ ಪ್ರವೇಶ ದೊರೆತಿದೆ. ಆಪರೇಷನ್ ಸಿಂಧೂರದಂತಹ ಕ್ಲಿಷ್ಟಕರ ಆಪರೇಷನ್ ಅನ್ನು ಮಹಿಳೆಯರೇ ನಿಭಾಯಿಸುವ ಮಟ್ಟಿಗೆ ಬದಲಾವಣೆಯಾಗಿದೆ. ಪೈಲಟ್‌ಗಳಾಗಿ, ಚಂದ್ರಯಾನ ಮಿಷನ್‌ನ ಮುಖ್ಯಸ್ಥರಾಗಿ, ಉದ್ಯಮಿಗಳಾಗಿ ಎಲ್ಲೆಡೆಯೂ ಮಹಿಳೆ ಸಮರ್ಥವಾಗಿ ಜವಾಬ್ದಾರಿ ನಿಭಾಯಿಸುವ ಮಟ್ಟಿಗೆ ಭಾರತ ಬದಲಾಗಿದೆ.

ಆದಾಗ್ಯೂ ನಿರೀಕ್ಷಿತ ಮಟ್ಟದಲ್ಲಿ ಮಹಿಳೆಯ ತೊಡಗಿಸಿಕೊಳ್ಳುವಿಕೆ ಸಾಧ್ಯವಾಗಿಲ್ಲ. ಮಹಿಳಾ ಸಬಲೀಕರಣಕ್ಕೆ ಸರ್ಕಾರದ ಈಗಿನ ಪ್ರಯತ್ನಗಳ ಜೊತೆಗೆ, ಹೊಸ ಯೋಚನೆಗಳು ಸೇರಬೇಕಿದೆ. ಗ್ರಾಮೀಣ ಮಹಿಳೆಯರಿಗೆ ಸ್ವಯಂ ಉದ್ಯೋಗದ ಪ್ರೋತ್ಸಾಹದ ಜೊತೆಗೆ ಜಾಗತಿಕ ಮಾರುಕಟ್ಟೆಯ ಸಂಪರ್ಕ ಅಗತ್ಯವಾಗಿದೆ. ಮಹಿಳೆಯರೇ ನಡೆಸುವ ಉದ್ಯಮಗಳಿಗೆ, ಸ್ವಾವಲಂಬಿ ಉದ್ಯೋಗಗಳಿಗೆ ವಿನೂತನತೆಯನ್ನು ನೀಡಬೇಕಿದ್ದು, ಬಲವರ್ಧನೆಯೂ ಆಗಬೇಕು. ಮಹಿಳಾ ನೇತೃತ್ವ ಕೆಳಹಂತದಲ್ಲಿ ಕೇವಲ ದಾಖಲೆಗಳಲ್ಲಿ ಮಾತ್ರ ಸಾಧ್ಯವಾಗುತ್ತಿದ್ದು, ವಾಸ್ತವದಲ್ಲಿ ತರಲು ಕಠಿಣ ನಿಯಮ ಮತ್ತು ಜಾಗೃತಿಯ ಅಗತ್ಯವಿದೆ.

**ವಿಜ್ಞಾನ ಮತ್ತು ತಂತ್ರಜ್ಞಾನ:** ಭಾರತವು ನಡೆಸಿದ ಚಂದ್ರಯಾನ, ಮಂಗಳಯಾನ, ಒಂದೇ ರಾಕೆಟ್‌ನಲ್ಲಿ 104 ಉಪಗ್ರಹಗಳನ್ನು ಯಶಸ್ವಿಯಾಗಿ ಉಡಾವಣೆ ಮಾಡಿ, ತನ್ನ ವೈಜ್ಞಾನಿಕ ಸಾಮರ್ಥ್ಯವನ್ನು ಜಗಜ್ಜಾಹೀರುಗೊಳಿಸಿದೆ. ಇಂದು ಇಸ್ರೋ ಭಾರತವನ್ನು ಅಂತರಿಕ್ಷದ ಅತ್ಯಂತ ಸಮರ್ಥ ರಾಷ್ಟ್ರವನ್ನಾಗಿಸುತ್ತಿದೆ. 4 ಲಕ್ಷ ಕೋಟಿ ಮೌಲ್ಯದ ಯುಪಿಐ ವಹಿವಾಟು ಭಾರತ ನಡೆಸುತ್ತಿದ್ದು, ವಿಶ್ವದ ವಹಿವಾಟುಗಳಲ್ಲಿ ಶೇ.49ರಷ್ಟು ಪಾಲು ನಮ್ಮದ್ದೇ ಇದೆ. ಇಡೀ ದೇಶದಲ್ಲಿ 116ಕೋಟಿ ಮೊಬೈಲ್ ಬಳಕೆದಾರರಿದ್ದಾರೆ. 2.14 ಲಕ್ಷ ಪಂಚಾಯಿತಿಗಳು ಆಪ್ಟಿಕಲ್ ಫೈಬರ್ ಸಂಪರ್ಕ ಹೊಂದಿವೆ. ಜಗತ್ತಿನಲ್ಲಿಯೇ ಅತೀ ಕಡಿಮೆ ದರದಲ್ಲಿ ಡೇಟಾ ಭಾರತದಲ್ಲಿ ಮಾತ್ರ ಲಭ್ಯ! ಕಳೆದ 10 ವರ್ಷಗಳಲ್ಲಿ ಭಾರತದ ಇಂಟರ್ನೆಟ್ ಬಳಕೆದಾರರ ಸಂಖ್ಯೆ 285% ಹೆಚ್ಚಳವಾಗಿದೆ. ಭಾರತದಲ್ಲಿ ಡಿಬಿಟಿ ಸುಲಭವಾಗಿದ್ದರಿಂದ ಸೋರಿಕೆ ತಡೆಯಲು ಸಾಧ್ಯವಾಗಿದೆ. ಭಾರತ ವಿಜ್ಞಾನ ಮತ್ತು ತಂತ್ರಜ್ಞಾನ ಸಂಶೋಧನಾ ಕ್ಷೇತ್ರದಲ್ಲಿ ಸಾಗಬೇಕಿರುವ ಮೈಲಿ ತುಂಬಾ ದೂರ. ಇಂದು ಮೊಬೈಲ್‌ನಿಂದ ಹಿಡಿದು, ಯುದ್ಧ ವಿಮಾನಗಳವರೆಗೆ ಬೇರೆ ರಾಷ್ಟ್ರಗಳನ್ನು ಭಾರತ ಅವಲಂಬಿಸಿದೆ. ಈಗ ಆತ್ಮನಿರ್ಭರತೆಯ ಹಾದಿಯಲ್ಲಿದ್ದೇವೆ. ಈ ವೇಗ ಹೆಚ್ಚಬೇಕು. ನ್ಯಾನೋ ತಂತ್ರಜ್ಞಾನ, ಮೊಬೈಲ್ ತಯಾರಿಕೆ, ಸಾಫ್ಟ್‌ವೇರ್ ಅಭಿವೃದ್ಧಿ, ಸೈಬರ್ ಸೆಕ್ಯೂರಿಟಿ, ಸರ್ಚ್‌ಇಂಜಿನ್‌ಗಳ ಬಗ್ಗೆ ನಮ್ಮ ಲಕ್ಷ್ಯ ಮುಖ್ಯವಾಗಿದೆ. ಬಾಹ್ಯಾಕಾಶದಲ್ಲಿ ಗುರುತಿಸಬಲ್ಲ ಸಾಧನೆ ಮಾಡುತ್ತಿದ್ದರೂ, ಮತ್ತೊಂದು ಎತ್ತರದ ಅಗತ್ಯವಿದೆ.


**ಆರೋಗ್ಯ ಕ್ಷೇತ್ರ:** ಭಾರತವು ಆರೋಗ್ಯ ಕ್ಷೇತ್ರದಲ್ಲಿ ಕಳೆದೊಂದು ದಶಕದಿಂದ ಕಂಡ ಬದಲಾವಣೆಗೆ ಜಗತ್ತೇ ನಿಬ್ಬೆರಗಾಗಿದೆ. ಕೋವಿಡ್ ಕಾಲದಲ್ಲಿ ನಾವು ಕಳಿಸಿದ ವ್ಯಾಕ್ಸಿನ್‌ಗೆ ಜಗತ್ತಿನಾದ್ಯಂತ ಶ್ಲಾಘನೆ ವ್ಯಕ್ತವಾಗಿದೆ. ಆಯುಷ್ಮಾನ್ ಯೋಜನೆ ಆರೋಗ್ಯ ಕ್ಷೇತ್ರದ ಕ್ರಾಂತಿಯಾಗಿದ್ದು, ಜನೌಷಧಿ ಕೇಂದ್ರಗಳ ಸ್ಥಾಪನೆ ಸಾಮಾನ್ಯರ ಪಾಲಿನ ಸಂಜೀವಿನಿ ಕೇಂದ್ರಗಳಾಗಿವೆ. ವೈದ್ಯಕೀಯ ಅಧ್ಯಯನದ ಸೀಟು ಹೆಚ್ಚಳ ಮಾಡಿದ್ದು, ಜಗತ್ತಿನಾದ್ಯಂತ ಭಾರತದ ವೈದ್ಯರಿಗೆ ವಿಶೇಷ ಬೇಡಿಕೆ ಇದೆ. ದೇಶದಲ್ಲಿ ನಡೆದ ಪ್ರಯತ್ನಗಳ ಹೊರತಾಗಿಯೂ ಆರೋಗ್ಯ ದುಬಾರಿ ಎಂಬ ಅಳಲಿದೆ. ಜನಸಮಾನ್ಯರಿಗೆ ಕಡಿಮೆ ದರದಲ್ಲಿ ಆರೋಗ್ಯ ಒದಗಿಸುವ ಪ್ರಯತ್ನವನ್ನು ಸರ್ಕಾರ ಅವಿರತವಾಗಿ ಮಾಡುತ್ತಿದ್ದರೂ, ಆರೋಗ್ಯ ವಿಮೆ ದೊರಕಿಸಿ ಕೊಟ್ಟಿದ್ದರೂ ಬಳಸಿಕೊಳ್ಳುವವರ ಅಜ್ಞಾನದ ಕಾರಣಕ್ಕೆ ಸಾಕಾರ ಸಾಧ್ಯವಾಗಿಲ್ಲ. ಆರೋಗ್ಯ ಹಾಗೂ ಶಿಕ್ಷಣಗಳೆರಡು ಸುಲಭ ಸಾಧ್ಯವಾಗಿ, ಉಚಿತವಾಗಿ ದೊರೆಯುವಂತಾಗಬೇಕು.

**ರಕ್ಷಣಾ ಕ್ಷೇತ್ರ:** ಭಾರತವು ರಕ್ಷಣಾ ಸ್ವದೇಶೀಕರಣಕ್ಕೆ ಮುನ್ನುಡಿ ಬರೆದಿದ್ದು, 5000ಕ್ಕೂ ಅಧಿಕ ವಸ್ತುಗಳು ಈ ಪಟ್ಟಿಯಲ್ಲಿವೆ. ಭಾರತದ ರಕ್ಷಣಾ ರಫ್ತು 23,622 ಕೋಟಿಯಷ್ಟಿದ್ದು, ಹಿಂದೆಂದಿಗಿಂತಲೂ ಹೆಚ್ಚು ಶಸ್ತ್ರಾಸ್ತ್ರಗಳನ್ನು ವಿದೇಶಗಳಿಗೆ ಕಳಿಸುತ್ತಿದೆ. ಯುದ್ಧ ಹೆಲಿಕಾಪ್ಟರ್, ಲಘು ವಿಮಾನಗಳು, ಮಿಸ್ಸೈಲ್‌ಗಳ ತಯಾರಿಕೆಯಲ್ಲಿ ಭಾರತ ಏರುಗತಿಯಲ್ಲಿದೆ. ರಕ್ಷಣಾ ಕ್ಷೇತ್ರದಲ್ಲಿ ಜಾಗತಿಕ ಬಲಿಷ್ಠ ರಾಷ್ಟ್ರಗಳ ಪೈಕಿ ಭಾರತವೂ ಅಗ್ರಸ್ಥಾನದಲ್ಲಿದ್ದರೂ, ಬದಲಾಗುತ್ತಿರುವ ಜಾಗತಿಕ ವಿದ್ಯಮಾನಗಳ ನಡುವೆ ಭಾರತ ಮತ್ತಷ್ಟು ಬಲಿಷ್ಠವಾಗಬೇಕಿದೆ. ಈ ದೃಷ್ಟಿಯಲ್ಲಿ ಹೆಚ್ಚು ಸ್ವದೇಶಿ ನಿರ್ಮಿತ ಶಸ್ತ್ರಾಸ್ತ್ರಗಳು, ಯುದ್ಧ ವಿಮಾನಗಳು, ಮಿಸ್ಸೈಲ್‌ಗಳು, ಸೈನಿಕ ವಾಹನಗಳು, ಸೇನಾ ಸಾಮಗ್ರಿಗಳನ್ನು ಉತ್ಪಾದಿಸುವ ಮತ್ತು ರಫ್ತು ಮಾಡುವ ಕಾರ್ಯ ತ್ವರಿತವಾಗಿ ಮತ್ತು ಅಧಿಕವಾಗಿ ಮಾಡಬೇಕಿದೆ.

ಭಾರತ ಶಿಕ್ಷಣ ರಂಗದಲ್ಲೂ ತನ್ನದೇ ಪ್ರಗತಿ ಸಾಧಿಸಿದ್ದು, ಸಾಕ್ಷರತಾ ಪ್ರಮಾಣ 77.77% ಆಗಿದೆ. ಹಲವು ಕ್ಷೇತ್ರಗಳಲ್ಲಿ ದೇಶವು ಪ್ರಗತಿಯ ದಾಪುಗಾಲು ಇಟ್ಟಿದ್ದು, ವಿಶ್ವಕ್ಕೆ ಮಾದರಿಯಾಗುವತ್ತ ಸಾಗಿದೆ. ಈ ಸಂದರ್ಭದಲ್ಲಿ ಭಾರತ ಸಕಲ ಕ್ಷೇತ್ರದಲ್ಲೂ ಅಷ್ಟೇ ಎಚ್ಚರಿಕೆಯ ಹೆಜ್ಜೆ ಇಡಬೇಕಿದೆ. ಜಾಗತಿಕ ಸ್ಥಿತ್ಯಂತರಕ್ಕೆ ಅನುಗುಣವಾಗಿ ತನ್ನತನವನ್ನು ಬದಲಿಸದೇ, ಸ್ವತ್ವದ ಅಡಿಯಲ್ಲಿ ಭಾರತ ಮತ್ತಷ್ಟು ಬೆಳಗಲಿ. ವಿಶೇಷವಾಗಿ ವಸಾಹತುಶಾಹಿ ಮನಸ್ಥಿತಿಯ ನಿವಾರಣೆ ದೇಶದಲ್ಲಾಗಬೇಕಿರುವ ಬಹುದೊಡ್ಡ ಪರಿವರ್ತನೆಯಾಗಿದೆ.

## ಸಂಸ್ಮರಣೆ

# ರಾಷ್ಟ್ರಕವಿ ಮೈಥಿಲಿ ಶರಣ್ ಗುಪ್ತ



ಆಧುನಿಕ ಹಿಂದಿ ಕವಿಗಳಲ್ಲಿ ಪ್ರಮುಖರಾಗಿ ಸಾಹಿತ್ಯ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದವರು ರಾಷ್ಟ್ರಕವಿ ಮೈಥಿಲಿ ಶರಣ್ ಗುಪ್ತ. ರಾಷ್ಟ್ರಕವಿ ಎಂಬ ಅಭಿದಾನಕ್ಕೆ ಅನ್ವರ್ಥವಾಗಿ ರಾಷ್ಟ್ರೀಯತೆಯ ಕುರಿತಾದ ಮತ್ತು ದೇಶಭಕ್ತಿಯನ್ನು ಮೂಡಿಸುವ ಕವನಗಳನ್ನು ಬರೆಯುತ್ತಿದ್ದರು. ಸಾಹಿತ್ಯ ಕ್ಷೇತ್ರವಲ್ಲದೇ ರಾಜಕೀಯ ಕ್ಷೇತ್ರದಲ್ಲೂ ಛಾಪುಮೂಡಿಸಿದ ಗುಪ್ತರು ಹಿಂದಿಯ ಖಾರಿ ಬೋಲಿ ಎಂಬ ಆಡುಭಾಷೆಯಲ್ಲಿ ಕವನಗಳನ್ನು ಬರೆದ ಮೊದಲಿಗರು.

**ಪರಿಚಯ:** ಮೈಥಿಲಿ ಶರಣ್ ಗುಪ್ತ ಅವರು ಆಗಸ್ಟ್ 3, 1886ರಂದು ಉತ್ತರ ಪ್ರದೇಶದ ಝೂನ್ಸಿಯ ಚಿರ್ಗಾಂವ್ ಗ್ರಾಮದಲ್ಲಿ ಜನಿಸಿದವರು. ಅವರ ತಂದೆ ಹೆಸರು ಸೇಥ್ ರಾಮಚರಣ್, ಅವರ ತಾಯಿ ಕಾಶಿ ಬಾಯಿ. ತಮ್ಮ ಸ್ವಗ್ರಾಮದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿದ ಅವರು ನಂತರ ಝೂನ್ಸಿಯ ಮ್ಯಾಕ್ ಡೊನಾಲ್ಡ್ ಹೈಸ್ಕೂಲ್‌ನಲ್ಲಿ ಓದಿದ್ದರು. ಅವರು ರಾಮ್ ಸ್ವರೂಪ್ ಶಾಸ್ತ್ರೀ ಮತ್ತು ದುರ್ಗಾದತ್ ಪಂತ್ ಸೇರಿದಂತೆ ಹಿಂದಿ, ಬಾಂಗ್ಲಾ ಹಾಗೂ ಸಂಸ್ಕೃತ ಭಾಷೆಯಲ್ಲಿ ಅಧ್ಯಯನ ನಡೆಸಿದ್ದರು. ಅಷ್ಟೇ ಅಲ್ಲದೆ ಅವರು ಮುನ್ಸಿ ಅಜೇರಿ ಪ್ರೇಮ್ ಅವರಿಂದ ಸ್ಫೂರ್ತಿ ಪಡೆದು ಆನೇಕ ಪತ್ರಿಕೆಗಳಿಗೆ ಕವನಗಳನ್ನು ಬರೆಯುತ್ತಿದ್ದರು. ನಂತರ ಅವರು ಬಹುತೇಕ ಕಾವ್ಯಾತ್ಮಕ ಪುಸ್ತಕಗಳನ್ನು ರಚಿಸಿದ್ದರು.

**ಕೃತಿಗಳು:** 1910ರಲ್ಲಿ ಅವರ ಮೊದಲ ಪ್ರಮುಖ ಕೃತಿ ರಂಗ್ ಮೇ ಭಂಗ್ ಇಂಡಿಯಾನ್ ಪ್ರೆಸ್‌ನಿಂದ ಪ್ರಕಟವಾಗಿತ್ತು. ಆಧ್ಯಾತ್ಮಿಕ ಗುರುಗಳು, ಐತಿಹಾಸಿಕ ಪಾತ್ರಗಳು, ಮಹಿಳಾ ಸಬಲೀಕರಣ, ದೇಶಭಕ್ತಿಯ ವಿಷಯಗಳ ಮೇಲೆ ಅವರ ಬರವಣಿಗೆ ಕೇಂದ್ರೀಕೃತವಾಗಿತ್ತು. ಅವರು 1910ರಲ್ಲಿ ಜಯದ್ರತ್ ವಥ್ ಮತ್ತು 1931ರಲ್ಲಿ ಸಾಕೇತ್ ಸೇರಿದಂತೆ ರಾಮಾಯಣ, ಮಹಾಭಾರತ, ಬೌದ್ಧ ಕತೆಗಳಾಧಾರಿತ ಅನೇಕ ಕವನ ಸಂಕಲನಗಳನ್ನು, ನಾಟಕಗಳನ್ನು ರಚಿಸಿದ್ದಾರೆ. 1912ರಲ್ಲಿ ಬಿಡುಗಡೆಯಾದ ಅವರ ಭಾರತ ಭಾರತಿ ಪುಸ್ತಕವು ಭಾರತೀಯ ಜನಸಾಮಾನ್ಯರಲ್ಲಿ ಸಂಚಲನವನ್ನು ಸೃಷ್ಟಿಸಿತ್ತು. ಪ್ಲಾಸಿ ಕಾ ಯುದ್ಧ, ಭಾರತ ಭಾರತಿ, ಪಂಚವಟಿ ಸೇರಿದಂತೆ ಅನೇಕ ಪ್ರಸಿದ್ಧ ಪುಸ್ತಕಗಳನ್ನು ಬರೆದಿದ್ದರು. ಯಶೋಧರ, ಅರ್ಜನ್ ಔರ್ ವಿಸರ್ಜನ್, ಜಯಭಾರತ್, ದ್ವಾಪರ, ವಿಶ್ವರಾಜ್ಯ, ಕಿರಣೊ ಕಾ ಕೇಲ್, ಮಾನವತಾ ಮುಂತಾದವು ಅವರ ಪ್ರಮುಖ ಕೃತಿಗಳು.

**ರಾಷ್ಟ್ರಕವಿ ಅಭಿದಾನ:** ಏಪ್ರಿಲ್ 5 1932ರಲ್ಲಿ ಅವರು ಮಹಾತ್ಮ ಗಾಂಧಿಯವರಿಂದ ಒಂದು ಪತ್ರವನ್ನು ಸ್ವೀಕರಿಸಿದ್ದು, ಅವರು ತಮ್ಮ ಸಾಕೇತ್ ಕೃತಿಗಳನ್ನು ಶ್ಲಾಘಿಸಿದರು. 1936ರಲ್ಲಿ ಕಾಶಿಯಲ್ಲಿ ನಡೆದ ಸಮಾರಂಭದಲ್ಲಿ ಮಹಾತ್ಮ ಗಾಂಧಿಯವರು ಮೈಥಿಲಿ ಶರಣ್ ಗುಪ್ತ ಅವರನ್ನು ರಾಷ್ಟ್ರಕವಿ ಎಂದು ಘೋಷಿಸಿದ್ದರು.

**ರಾಜಕೀಯ ಜೀವನ:** ಸ್ವಾತಂತ್ರ್ಯಾನಂತರ 1952 ಮಾರ್ಚ 12 ರಂದು ಅವರು ರಾಜ್ಯಸಭೆಯ ಸದಸ್ಯರಾಗಿ ಆಯ್ಕೆಗೊಳ್ಳುತ್ತಾರೆ. 1958ರಲ್ಲಿ ಅವರು ಎರಡನೇ ಬಾರಿ ರಾಜ್ಯಸಭೆಯ ಸದಸ್ಯರಾಗಿ ಆಯ್ಕೆಯಾಗುತ್ತಾರೆ. ಒಟ್ಟು 15 ವರ್ಷಗಳ ಕಾಲ ರಾಜ್ಯಸಭೆಯ ಗೌರವ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ.

**ಪ್ರಶಸ್ತಿಗಳು:** 1941ರಲ್ಲಿ ವಾರಣಾಸಿಯ ನಗರಿ ಪ್ರಚಾರಿಣಿ ಸಭಾದಿಂದ ಸುಧಾಕರ ಪದಕ ಪಡೆದಿದ್ದಾರೆ. 1946ರಲ್ಲಿ ಕರಾಚಿಯಲ್ಲಿ ಹಿಂದಿ ಸಾಹಿತ್ಯ ಸಂಘದಿಂದ ಸಾಹಿತ್ಯ ವಾಚಸ್ಪತಿ, 1948ರಲ್ಲಿ ಆಗ್ರಾ ವಿಶ್ವವಿದ್ಯಾಲಯದಿಂದ ಡಾಕ್ಟರ್ ಆಫ್ ಲಿಟರೇಚರ್ ಗೌರವಕ್ಕೆ ಪಾತ್ರರಾಗಿದ್ದಾರೆ. ಹಾಗೆಯೇ ಅವರ ಸಾಹಿತ್ಯದ ಕೊಡುಗೆಯನ್ನು ಗಮನಿಸಿ 1954ರಲ್ಲಿ ಕೇಂದ್ರ ಸರ್ಕಾರ ರಾಷ್ಟ್ರದ ಅತ್ಯುನ್ನತ ನಾಗರಿಕ ಪ್ರಶಸ್ತಿಗಳಲ್ಲಿ ಒಂದಾದ ಪದ್ಮಭೂಷಣ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಮೈಥಿಲಿ ಶರಣ್ ಗುಪ್ತ ಅವರು ಡಿಸೆಂಬರ್ 12, 1964 ರಂದು ತಮ್ಮ 78ನೇ ವಯಸ್ಸಿನಲ್ಲಿ ಝೂನ್ಸಿಯಾ ಚಿರ್ಗಾಂವ್ ಗ್ರಾಮದ ಸ್ವಗೃಹದಲ್ಲಿ ನಿಧನರಾದರು.

# ಬಘುವಾರ್ ಎಂಬ ಮಾದರಿ ಗ್ರಾಮ - (ಮಧ್ಯಪ್ರದೇಶ)

ವಾಸ್ತವವಾಗಿ ಭಾರತದ ಅಸ್ತಿತ್ವ ಹಳ್ಳಿಗಳಲ್ಲಿದೆ ಎಂಬುದು ಸತ್ಯವಾದ ಮಾತು. ಒಂದು ವೇಳೆ ನೀವು ಯಾವುದಾದರೂ ಆದರ್ಶ ಗ್ರಾಮವನ್ನು ನೋಡಲು ಬಯಸಿದ್ದರೆ ಮಧ್ಯಪ್ರದೇಶದ ನರಸಿಂಹಪುರ ಜಿಲ್ಲೆಯ ಬಘುವಾರ್ ಹಳ್ಳಿಗೆ ಬನ್ನಿ. ಇಲ್ಲಿ ಸ್ವಚ್ಛವಾದ ರಸ್ತೆಗಳು, ಒಳ ಚರಂಡಿಗಳು, ಪ್ರತೀ ಮನೆಯಲ್ಲೂ ಶೌಚಾಲಯಗಳು, ಆಟವಾಡಲು ಒಳಾಂಗಣ ಕ್ರೀಡಾಂಗಣ ಹಾಗೂ ಅಡುಗೆಗಾಗಿ ಜೈವಿಕ ಅನಿಲ ಸ್ಥಾವರವನ್ನು ನೀವು ಇಲ್ಲಿ ನೋಡಬಹುದು. ಹಲವು ವರ್ಷಗಳಿಂದ ಹಳ್ಳಿಯ ಯಾವುದೇ ವಿವಾದವು ಪೊಲೀಸ್ ಠಾಣೆಯವರೆಗೂ ಬಂದಿಲ್ಲ. ಶಾಲೆ ಹಾಗೂ ಸಮುದಾಯ ಭವನಕ್ಕಾಗಿ ಸರ್ಕಾರ ನೀಡಿದ ಹಣವು ಕಮ್ಮಿಯಾದಾಗ ಬಘುವಾರ್ ಹಳ್ಳಿಯ ಜನರೆ ಹಣವನ್ನು ನೀಡಿದ್ದಲ್ಲದೆ ಶ್ರಮಸೇವೆಯನ್ನೂ ಮಾಡಿದ್ದಾರೆ.

ಇವೆಲ್ಲವೂ 50ವರ್ಷಗಳಿಂದ ನಡೆಯುತ್ತಿರುವ ಸಂಘದ ಶಾಖೆ ಹಾಗೂ ಸ್ವಯಂಸೇವಕರಿಂದ ನಡೆಯುತ್ತಿರುವ ಗ್ರಾಮ ವಿಕಾಸದ ಪ್ರಯತ್ನದ ಪರಿಣಾಮವಾಗಿದೆ. ಸುಮಾರು 25 ವರ್ಷಗಳಿಂದ ಅವಿರೋಧವಾಗಿ ಗ್ರಾಮದ ಸರಪಂಚರಾಗಿರುವ ಠಾಕೂರ್ ಸುರೇಂದ್ರ ಸಿಂಹ, ಠಾಕೂರ್ ಸಂಗ್ರಾಮ್ ಸಿಂಹ ಹಾಗೂ ಹರಿಶಂಕರಲಾಲರಂತಹ ಸ್ವಯಂಸೇವಕರು ಅಂದಿನ ಸರಕಾರ್ಯವಾಹರಾದ ಭಾವುರಾವ್ ದೇವರಸರ ಪ್ರೇರಣೆಯಿಂದ ತಮ್ಮ ಹಳ್ಳಿಯನ್ನು ಆದರ್ಶ ಗ್ರಾಮವನ್ನಾಗಿ ಮಾಡಲು ನಿರ್ಧರಿಸಿದರು. 50 ವರ್ಷಗಳಿಂದ ನಿಯಮಿತವಾಗಿ ನಡೆಯುತ್ತಿರುವ ಪ್ರಭಾತ ಫೇರಿ, ಪ್ರತಿ ಮನೆಯ ಗೋಡೆಗಳ ಮೇಲೆ ಬರೆದ ಒಳ್ಳೆಯ ವಿಚಾರಗಳು ಹಾಗೂ ಮಳೆಯ ನೀರನ್ನು ಸಂಗ್ರಹಿಸುವ ಅಭ್ಯಾಸ, ಇವು ಬಘುವಾರನ್ನು ಬೇರೆ ಎಲ್ಲಾ ಹಳ್ಳಿಗಳಿಗಿಂತ ಭಿನ್ನವಾಗಿಸಿದೆ.




1950ರಿಂದ ಬಘುವಾರ್‌ನ ಗ್ರಾಮ ವಿಕಾಸ ಸಮಿತಿಯು ಸಮಗ್ರ ಗ್ರಾಮ ವಿಕಾಸಕ್ಕಾಗಿ ಕಾರ್ಯನಿರ್ವಹಿಸುತ್ತಿದೆ. ಹಳ್ಳಿಯನ್ನು ತಲುಪುವ 3ಕಿ.ಮೀ. ಉದ್ದದ ರಸ್ತೆಯನ್ನು ಇಲ್ಲಿನ ಯುವಕರು ಸೇರಿ ನಿರ್ಮಿಸಿದ್ದಾರೆ. ಕೃಷಿತಜ್ಞ ಹಾಗೂ ಸಂಘದ ತೃತಿಯ ವರ್ಷ ಶಿಕ್ಷಣ ಮುಗಿಸಿರುವ ಸ್ವಯಂಸೇವಕರಾದ ಬಘುವಾರ್ ವಾಸಿಯಾದ ಎಮ್.ಪಿ. ನರೋಲಿಯಾಜೀ ಹೇಳುವಂತೆ ಹಳ್ಳಿಯ ಜನರು ಎಂದಿಗೂ ಅಭಿವೃದ್ಧಿಗಾಗಿ ಸರ್ಕಾರವನ್ನು ಅವಲಂಬಿಸಿಲ್ಲ. ಸರ್ಕಾರದಿಂದ ಪಡೆದ ಹಣಕ್ಕೆ ಹಳ್ಳಿಯವರು 1.5ಲಕ್ಷದಷ್ಟು ಹಣವನ್ನು ಸೇರಿಸಿ ಶಾಲೆಯ ಕಟ್ಟಡವನ್ನು ನಿರ್ಮಿಸಿದರು. ಹಾಗೆಯೆ ಭ್ರಮರಿ ನದಿಗೆ ಅಣೆಕಟ್ಟನ್ನು ನಿರ್ಮಿಸಲು 2.5ಲಕ್ಷ ಹಣವನ್ನು ನೀಡಿ ನೀರಿನ ಕೊರತೆಯಿಂದ ಕೃಷಿಗೆ ಆಗುತ್ತಿದ್ದ ತೊಂದರೆಯನ್ನು ಪರಿಹರಿಸಿಕೊಂಡರು. ನಿಯಮಿತವಾದ ಸ್ವಚ್ಛತೆ, ಮನೆಗಳ ಮುಂದೆ ಇಂಗು ಗುಂಡಿ, ಒಳಚರಂಡಿಗಳ ನಿರ್ಮಾಣ, ಮರಗಳನ್ನು ನೆಡುವುದು, ಹಾಗೂ ಇಂದ್ರ ದೇವರ ಕೃಪೆಯಿಂದ ಸುರಿಯುವ ಮಳೆಯ ಪ್ರತಿ ಹನಿಯನ್ನು ಕಾಪಾಡಿ ನೀರಾವರಿಗಾಗಿ ಬಳಸುವುದು ಹಳ್ಳಿಯ ಪ್ರತಿಯೊಬ್ಬರ ಅಭ್ಯಾಸವಾಗಿದೆ.

ನೂರಕ್ಕೆ ನೂರಷ್ಟು ಸಾಕ್ಷರತೆ, ಮನೆಗಳ ಗೋಡೆಯ ಮೇಲೆ ಬರೆದ ಪ್ರೇರಣಾದಾಯಕ, ಜ್ಞಾನವರ್ಧಕ ಹಾಗೂ ಸಂಸ್ಕಾರಪೂರ್ಣ ವಾಕ್ಯಗಳು ಮನಸ್ಸಿನ ಮೇಲೆ ಆಳವಾದ ಪ್ರಭಾವವನ್ನು ಬೀರುತ್ತವೆ. ಶೇಕಡ 40ರಷ್ಟು ಮನೆಗಳ ಊಟವನ್ನು ಗೋಬರ್ ಗ್ಯಾಸ್ ಬಳಸಿ ತಯಾರಿಸಲಾಗುತ್ತದೆ. ಇಲ್ಲಿನ ಸರ್ಕಾರಿ ಶಾಲೆಯಲ್ಲಿ ಮಕ್ಕಳ ವಿದ್ಯಾಭ್ಯಾಸ ಚೆನ್ನಾಗಿ ನಡೆಯಲು, ಮಕ್ಕಳು ಹಾಗೂ ಶಿಕ್ಷಕರ ಹಾಜರಾತಿ ಸರಿಯಾಗಿ ಇರುವಂತೆ ನೋಡಿಕೊಳ್ಳಲು, ಸಮಿತಿಯ ಸದಸ್ಯರು ಎಲ್ಲಾ ಪ್ರಯತ್ನವನ್ನು ಮಾಡುತ್ತಾರೆ.

ಇದೇ ಸರ್ಕಾರಿ ಶಾಲೆಯಲ್ಲಿ ಓದು ಮುಗಿಸಿದ ನರೊಲಿಯಾಜೀ ಕೃಷಿ ಸಂಚಾಲಕರಾದರೆ, ಅವಧೇಶ್ ಶರ್ಮ ಲೆಫ್ಟಿನೆಂಟ್ ಆಗಿದ್ದಾರೆ. ಇಷ್ಟೆ ಅಲ್ಲ ಕೆಲವರು ಡಾಕ್ಟರ್‌ಗಳಾದರೆ, ಮೂವರು ಪಿ ಎಚ್ ಡಿ ಕೂಡಾ ಮಾಡಿದ್ದಾರೆ. ಐಎಎಸ್‌ಗೆ ತಯಾರಿ ನಡೆಸುತ್ತಿರುವ ವಿದ್ಯಾರ್ಥಿಗಳು ಪರೀಕ್ಷೆಗೆ ಮೊದಲು ಈ ಹಳ್ಳಿಯನ್ನು ಒಮ್ಮೆ ನೋಡಬೇಕು ಎಂದು ನರಸಿಂಹಪುರದ ಕಲೆಕ್ಟರ್ ಮನೀಶ್ ಸಿಂಹರ ಸಲಹೆಯಂತೆ ವಿದ್ಯಾರ್ಥಿಗಳ ಹಲವು ತಂಡಗಳು ಈ ಹಳ್ಳಿಯನ್ನು ನೋಡಲು ಬಂದಿವೆ. ಸಂಪರ್ಕಿಸಿ: ಶ್ರೀ ಸುಭಾಶ್. ಮೊಬೈಲ್ ನಂ:7697335610


## ಪುಸ್ತಕ ಪರಿಚಯ

ಡಾ॥ ಜಿ.ಎಸ್. ಅಮೂರ ಅವರ

# ಸಮಗ್ರ ಬೇಂದ್ರೆ ವಿಮರ್ಶೆ

**ಸಂಪಾದಕರು:** ಡಾ॥ ಜಿ.ಎಂ.ಹೆಗಡೆ

**ಬೆಲೆ:** ರೂ.1250




ಬೇಂದ್ರೆಯವರ ಸಾಹಿತ್ಯದ ಮೇಲೆ ಅಲ್ಲಿ ಇಲ್ಲಿ ಕೆಲವು ಲೇಖನಗಳು, ಅವರ ಕಾವ್ಯದ ಮೇಲೆ ಒಂದೆರಡು ಗ್ರಂಥಗಳು ಬಂದಿದ್ದರೂ ಸಮಗ್ರವಾಗಿ ಅವರ ಸಾಹಿತ್ಯದ ಮೇಲೆ ಬೆಳಕು ಚೆಲ್ಲುವ, ಅವರ ಸಾಹಿತ್ಯ ಮೇಲೆ ಬಂದಿರುವ ಎಲ್ಲ ವಿಮರ್ಶೆಗಳನ್ನೂ ಗಮನಿಸಿ, ತಮ್ಮ ಕೃತಿಗಳ ಮೇಲೆ ಬೇಂದ್ರೆಯವರೆ ಹೇಳಿರುವ ಮಾತುಗಳನ್ನೆಲ್ಲ ಸಂಗ್ರಹಿಸಿ, ಸಮೀಕ್ಷೆ ನಡೆಸಿ, ಬೇಂದ್ರೆಯವರು ಯಾವ ಯಾವ ಕೃತಿಗಳಿಂದ, ಸಾಹಿತಿಗಳಿಂದ ಪ್ರಭಾವಿತರಾದರು. ಆ ಪ್ರಭಾವಗಳನ್ನೆಲ್ಲ ಮೀರಿ ನಿಂತು ಅವರ ಕೃತಿಗಳು ಹೇಗೆ ಸ್ವತಂತ್ರ ಕೃತಿಗಳಾಗಿ ಕನ್ನಡ ಕಾವ್ಯ ಸಂಪ್ರದಾಯದಲ್ಲೇ ಅನನ್ಯವಾಗಿವೆ ಎಂಬುದನ್ನು ಇಲ್ಲಿ ಸವಿಸ್ತಾರವಾಗಿ ಚಿತ್ರಿಸಿ ಶ್ರೀ ಆಮೂರರು ಬೇಂದ್ರೆಯವರ ಸಾಹಿತ್ಯದ ಆಳವಾದ ಅಭ್ಯಾಸಕ್ಕೆ ತುಂಬ ಸಹಕಾರಿಯಾಗುವಂತೆ ರಚಿಸಿದ ಕೃತಿ ಇಲ್ಲಿದೆ. ಕನ್ನಡ ರಸಿಕರೆಲ್ಲರೂ ಗಮನಿಸಲೇಬೇಕಾದ ಗ್ರಂಥ ಇದು ಎಂದೂ ಧಾರಾಳವಾಗಿ ಹೇಳಬಹುದು.

ಹಾಗಂತ ಇಲ್ಲಿ ಹೇಳಿದ ಎಲ್ಲ ಸಂಗತಿಗಳನ್ನೂ ಎಲ್ಲರೂ ಒಪ್ಪುತ್ತಾರೆಂದಾಗಲೀ, ಒಪ್ಪಲೇಬೇಕೆಂದಾಗಲೀ ಅಲ್ಲ. ಮುಂದೆ ಚರ್ಚಿಸಿ ಒಂದು ಸಿದ್ಧಾಂತಕ್ಕೆ ಬರಬಹುದಾದ, ಹಾಗೆ ಬರಲು ತಕ್ಕ ಮೌಲಿಕ ಸಾಮಗ್ರಿ ಇಲ್ಲಿದೆ. ಅಂಥ ಕೆಲಸ ಸಾರೋದ್ಧಾರ ನಡೆಯಲಿ. ಆ ಮೂಲಕ ಈ ಕೃತಿ ಕೃತಿಕಾರ ಇಬ್ಬರೂ ಕೃತಾರ್ಥತೆ ಪಡೆಯಲಿ ಎಂದು ಹಾರಯಿಸಿ ಶುಭಾಶಯಗಳನ್ನು ಇಲ್ಲಿ ಸಲ್ಲಿಸುತ್ತೇನೆ.

ಪುಸ್ತಕಕ್ಕಾಗಿ ಸಂಪರ್ಕಿಸಿ: 63605 81957




ಅನೇಕ ಸಂದರ್ಭಗಳಲ್ಲಿ ಸಂವಿಧಾನವು ನಮಗೆ ನೀಡಿರುವ ಮೂಲಭೂತ ಹಕ್ಕುಗಳ ಕುರಿತಾಗಿ ಮಾತ್ರ ನಾವು ಗಮನವಹಿಸುತ್ತೇವೆ. ಆದರೆ ನಮ್ಮ ಮೂಲಭೂತ ಕರ್ತವ್ಯಗಳನ್ನು ನಾವು ನಿರ್ಲಕ್ಷಿಸಿದ್ದೇವೆ. ನಮ್ಮ ಸಂವಿಧಾನದ ಮೂಲಭೂತ ಕರ್ತವ್ಯಗಳಲ್ಲಿ "ಸ್ವಾತಂತ್ರ್ಯ ಹೋರಾಟಕ್ಕೆ ಸ್ಫೂರ್ತಿ ನೀಡಿದ ಆದರ್ಶಗಳನ್ನು ಪಾಲಿಸುವುದು ಮತ್ತು ಅನುಸರಿಸುವುದು" ಎಂಬ ಕರ್ತವ್ಯವನ್ನೂ ತಿಳಿಸಲಾಗಿದೆ. ಇತ್ತೀಚೆಗಿನ ದಿನಗಳಲ್ಲಿ ರಾಜಕೀಯ ಹಾಗೂ ಸೈದ್ಧಾಂತಿಕ ಕಾರಣಗಳಿಗಾಗಿ ಅನೇಕ ಸ್ವಾತಂತ್ರ್ಯ ಹೋರಾಟಗಾರರನ್ನು ಅತ್ಯಂತ ನಿಕೃಷ್ಟವಾಗಿ ಕಾಣುವ, ಅವರನ್ನು ವಾಚಾಮಗೋಚರ ನಿಂದಿಸುವ ಪ್ರಕ್ರಿಯೆ ಹೆಚ್ಚಾಗುತ್ತಿದೆ. ಅವರ ಜೀವನವನ್ನು ವಿಮರ್ಶಿಸುವುದಕ್ಕೂ, ನಿಂದಿಸುವುದಕ್ಕೂ ವ್ಯತ್ಯಾಸವಿದೆ. ಅದನ್ನು ಅರಿತು ನಾವೆಲ್ಲರೂ ನಮ್ಮ ವ್ಯವಹಾರವನ್ನು ಮಾಡಬೇಕಿದೆ. ಪ್ರತಿಯೊಬ್ಬ ಸ್ವಾತಂತ್ರ್ಯ ಹೋರಾಟಗಾರರೂ ಅವರವರ ಕಾಲಘಟ್ಟದಲ್ಲಿ ಅವರವರ ಶಕ್ತಿಗನುಗುಣವಾಗಿ ರಾಷ್ಟ್ರದ ಸ್ವಾತಂತ್ರ್ಯಕ್ಕೆ, ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಇತ್ಯಾದಿ ಕ್ಷೇತ್ರಗಳ ಅಭಿವೃದ್ಧಿಗೆ ಕೊಡುಗೆಯನ್ನು ನೀಡಿದ್ದಾರೆ. ಅದನ್ನು ಗೌರವಿಸುತ್ತಾ, ಅವರ ಆದರ್ಶಗಳನ್ನು ಪಾಲಿಸುತ್ತಾ ರಾಷ್ಟ್ರಕ್ಕಾಗಿ ದುಡಿಯುವ ಅವಕಾಶ ಇದೀಗ ನಮ್ಮೆಲ್ಲರ ಪಾಲಿಗಿದೆ.

**ಸಂಪಾದಕೀಯ ಸಹಕಾರ:** ಕಿರಣ್ ಕುಮಾರ್ ವಿವೇಕವಂಶಿ, ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ವಿನಯಕೃಷ್ಣ ಹೆಚ್ ವಿ, ಗಿರಿಧರ ಉದ್ಯಾವರ

## $5.96 ಬಿಲಿಯನ್ ತಲುಪಿದೆ ಭಾರತದ ಕೃಷಿ ಮತ್ತು ಸಂಸ್ಕರಿಸಿದ ಆಹಾರ ರಫ್ತು

2025–26ರ ಮೊದಲ ತ್ರೈಮಾಸಿಕದಲ್ಲಿ (ಏಪ್ರಿಲ್–ಜೂನ್) ಭಾರತದ ಕೃಷಿ ಮತ್ತು ಸಂಸ್ಕರಿಸಿದ ಆಹಾರ ಉತ್ಪನ್ನಗಳ ರಫ್ತು ವರ್ಷದಿಂದ ವರ್ಷಕ್ಕೆ ಶೇ.7 ಕ್ಕಿಂತ ಹೆಚ್ಚು ಏರಿಕೆಯಾಗಿ $5.96 ಬಿಲಿಯನ್‌ಗೆ ತಲುಪಿದೆ ಎಂದು ಮೂಲಗಳು ವರದಿ ಮಾಡಿವೆ. ಬಾಸ್ಮತಿ ಮತ್ತು ಬಾಸ್ಮತಿಯೇತರ ಪ್ರಭೇದಗಳನ್ನು ಒಳಗೊಂಡಂತೆ ಅಕ್ಕಿ ರಫ್ತು ಶೇ. 3.5 ರಷ್ಟು ಏರಿಕೆಯಾಗಿ $2.9 ಬಿಲಿಯನ್‌ಗೆ ತಲುಪಿದೆ. FY25 ರಲ್ಲಿ, ಅಕ್ಕಿ ರಫ್ತು ದಾಖಲೆಯ $12.47 ಬಿಲಿಯನ್‌ಗೆ ತಲುಪಿದ್ದು, 2023–24 ರಿಂದ ಶೇ. 20 ಕ್ಕಿಂತ ಹೆಚ್ಚು. ಜಾಗತಿಕ ಅಕ್ಕಿ ಮಾರುಕಟ್ಟೆಯಲ್ಲಿ ಶೇ. 40 ಕ್ಕಿಂತ ಹೆಚ್ಚು ಪಾಲನ್ನು ಹೊಂದಿರುವ ಭಾರತವು ಒಂದು ದಶಕಕ್ಕೂ ಹೆಚ್ಚು ಕಾಲ ಅಕ್ಕಿಯ ಅಗ್ರ ರಫ್ತುದಾರನಾಗಿ ತನ್ನ ಸ್ಥಾನವನ್ನು ಉಳಿಸಿಕೊಂಡಿದೆ. ಮಾಂಸ, ಡೈರಿ ಮತ್ತು ಕೋಳಿ ಸಾಗಣೆಗಳು ಶೇ. 17ಕ್ಕಿಂತ ಹೆಚ್ಚು ಬೆಳೆದು $1.18 ಬಿಲಿಯನ್‌ಗೆ ತಲುಪಿದ್ದರೆ, ಹಣ್ಣುಗಳು ಮತ್ತು ತರಕಾರಿಗಳ ರಫ್ತು ಶೇ. 13 ರಷ್ಟು ಏರಿಕೆಯಾಗಿ $0.95 ಬಿಲಿಯನ್‌ಗೆ ತಲುಪಿದೆ.

## ದೇಶದ 2ನೇ ಅತಿ ಉದ್ದದ ಕೇಬಲ್ ಬ್ರಿಡ್ಜ್ 'ಸಿಗಂದೂರು ಸೇತುವೆ' ಲೋಕಾರ್ಪಣೆ



ರಾಜ್ಯದ ಇತಿಹಾಸ ಪುಟಗಳಲ್ಲಿ ಶಾಶ್ವತವಾಗಿ ದಾಖಲಾಗುವಂತ ಐತಿಹಾಸಿಕ ಕೇಬಲ್ ಆಧಾರಿತ 2.25 ಕಿ.ಮೀ ಉದ್ದದ ಸುಮಾರು 423.00 ಕೋಟಿ ಅನುದಾನದಲ್ಲಿ ದೇಶದ ಎರಡನೇ ಅತಿ ದೊಡ್ಡ ಸಂಪರ್ಕ ಸೇತುವೆ "ಅಂಬಾರಗೋಡ್ಲು – ಕಳಸವಳ್ಳಿ – ಸಿಗಂಧೂರು – ಕೊಲ್ಲೂರು (ಸ್ಥಳೀಯರ ಹೊಳೆಬಾಗಿಲು ಸೇತುವೆ)" ಸಂಪರ್ಕ ಕಲ್ಪಿಸುವ ಸೇತುವೆಯನ್ನು ಕೇಂದ್ರ ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ಸೇರಿದಂತೆ ಅನೇಕ ಗಣ್ಯರು ಲೋಕಾರ್ಪಣೆ ಮಾಡಿದರು.

## ಕಳೆದ 11 ವರ್ಷಗಳಲ್ಲಿ ನಾಗರಿಕ ಕೇಂದ್ರಿತವಲ್ಲದ 1,600 ನಿಯಮಗಳು ರದ್ದು



ಕಳೆದ 11 ವರ್ಷಗಳಲ್ಲಿ ನಾಗರಿಕ ಕೇಂದ್ರಿತವಲ್ಲದ ಸುಮಾರು 1,600 ನಿಯಮಗಳನ್ನು ಸರ್ಕಾರ ರದ್ದುಗೊಳಿಸಿದೆ ಎಂದು ಕೇಂದ್ರ ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆಗಳು ಮತ್ತು ಪಿಂಚಣಿಗಳ ರಾಜ್ಯ

# ಸಾಲುದ್ದದ ಸುದ್ದಿಗಳು

ಸಚಿವ ಡಾ. ಜಿತೇಂದ್ರ ಸಿಂಗ್ ಹೇಳಿದ್ದಾರೆ. ಕೇಂದ್ರ ಸರ್ಕಾರ ಮತ್ತು ಒಡಿಶಾ ಸರ್ಕಾರದ ಆಡಳಿತ ಸುಧಾರಣೆಗಳು ಮತ್ತು ಸಾರ್ವಜನಿಕ ಕುಂದುಕೊರತೆಗಳ ಇಲಾಖೆ ಜಂಟಿಯಾಗಿ ಭುವನೇಶ್ವರದಲ್ಲಿ ಆಯೋಜಿಸಿದ್ದ 'ಉತ್ತಮ ಆಡಳಿತ ಪದ್ಧತಿಗಳು' ಕುರಿತ ಎರಡು ದಿನಗಳ ರಾಷ್ಟ್ರೀಯ ಸಮ್ಮೇಳನವನ್ನು ಉದ್ಘಾಟಿಸಿದ ಡಾ. ಸಿಂಗ್, ಪಾರದರ್ಶಕತೆ, ಭ್ರಷ್ಟಾಚಾರ ವಿರೋಧಿ ಕ್ರಮಗಳು ಮತ್ತು ಸುವ್ಯವಸ್ಥಿತ ಆಡಳಿತದ ಮೂಲಕ ನಾಗರಿಕರ ಜೀವನವನ್ನು ಸರಳಗೊಳಿಸುವ ಉತ್ತಮ ಆಡಳಿತವನ್ನು ಒತ್ತಿ ಹೇಳಿದರು. ಇದು 'ಆಡಳಿತದ ಸುಲಭತೆ' ಮತ್ತು 'ಜೀವನದ ಸುಲಭತೆ'ಗೆ ಕಾರಣವಾಗುತ್ತದೆ.

## 6.6,900 ಕೋಟಿ ರೂ.ಗಳಲ್ಲಿ 307 ಸ್ವದೇಶಿ ATAGS ಬಂದೂಕುಗಳನ್ನು ಸೇರ್ಪಡೆಗೊಳಿಸಲಿದೆ ಸೇನೆ




ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (DRDO) ಅಡಿಯಲ್ಲಿರುವ ಪ್ರಯೋಗಾಲಯವಾದ ಪುಣೆಯ ಶಸ್ತ್ರಾಸ್ತ್ರ ಸಂಶೋಧನೆ ಮತ್ತು ಅಭಿವೃದ್ಧಿ ಸ್ಥಾಪನೆ (ARDE) ವಿನ್ಯಾಸಗೊಳಿಸಿದ ATAGS ಅನ್ನು "ಅನುಕರಣೀಯ ಮಿಷನ್ ಮೋಡ್ ಯಶಸ್ಸು" ಎಂದು ಬಣ್ಣಿಸಲಾಗಿದೆ. ವ್ಯವಸ್ಥೆಯ ಅತ್ಯಾಧುನಿಕ ತಂತ್ರಜ್ಞಾನ ಮತ್ತು ನಮ್ಮ ರಾಷ್ಟ್ರದ ಆತ್ಮನಿರ್ಭರತೆಯನ್ನು ಉತ್ತೇಜಿಸುವಲ್ಲಿ ARDE ಯ ಪ್ರಮುಖ ಪಾತ್ರವನ್ನು ವಹಿಸುತ್ತದೆ ಎಂದು ಹೇಳಿದರು. ಮಾರ್ಚ್ ಆರಂಭದಲ್ಲಿ, ರಕ್ಷಣಾ ಸಚಿವಾಲಯವು ಭಾರತ್ ಫೋರ್ಜ್ ಲಿಮಿಟೆಡ್ ಮತ್ತು ಟಾಟಾ ಅಡ್ವಾನ್ಸ್ಡ್ ಸಿಸ್ಟಮ್ಸ್ ಲಿಮಿಟೆಡ್ ಜೊತೆ 155mm/52 ಕ್ಯಾಲಿಬರ್ ATAGS ಮತ್ತು ಹೈ ಮೊಬಿಲಿಟಿ 6x6 ಗನ್ ಟೋವಿಂಗ್ ವಾಹನಗಳ ಖರೀದಿಗಾಗಿ ಸುಮಾರು 6,900 ಕೋಟಿ ರೂ.ಗಳ ಒಪ್ಪಂದಗಳಿಗೆ ಸಹಿ ಹಾಕಿತು. ಮುಂದಿನ ಐದು ವರ್ಷಗಳಲ್ಲಿ ಭಾರತೀಯ ಸೇನೆಯು 307 ಹೊಸ ಬಂದೂಕುಗಳನ್ನು ಸ್ವೀಕರಿಸಲು ಸಿದ್ಧವಾಗಿದೆ, ಇದು ವಿಂಟೇಜ್ ಫಿರಂಗಿಗಳನ್ನು ಬದಲಾಯಿಸುವಲ್ಲಿ ಮತ್ತು ಕಾರ್ಯಾಚರಣೆಯ ಸಿದ್ಧತೆಯನ್ನು ಹೆಚ್ಚಿಸುವಲ್ಲಿ ನಿರ್ಣಾಯಕ ಹೆಜ್ಜೆಯಾಗಿದೆ.

## ಭೂಸ್ಪರ್ಶ ಮಾಡಿದ ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ



ಭಾರತದ ಗಗನಯಾತ್ರಿ ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ಭೂಮಿಗೆ ಆಗಮಿಸಿದ್ದಾರೆ. ಗ್ರೂಪ್ ಕ್ಯಾಪ್ಟನ್ ಶುಕ್ಲಾ ಮತ್ತು ಇತರರನ್ನು ಹೊತ್ತ ಸ್ಪೇಸ್‌ಎಕ್ಸ್ ಸಿಬ್ಬಂದಿ ಕ್ಯಾಪ್ಸುಲ್ ಗ್ರೇಸ್, IST ಜುಲೈ 15, ಮಧ್ಯಾಹ್ನ 3 ಗಂಟೆಯ ನಂತರ ಸ್ಯಾನ್ ಡಿಯಾಗೋ ಬಳಿಯ ಕ್ಯಾಲಿಫೋರ್ನಿಯಾ ಕರಾವಳಿಯಲ್ಲಿ ಜಲಸ್ಪರ್ಶ ಮಾಡಿದೆ. ಭಾರತೀಯ ಕಾಲಮಾನ ಜುಲೈ 14ರ ಮಧ್ಯಾಹ್ನ 2.37ಕ್ಕೆ ಗಗನಯಾತ್ರಿಗಳು ನೌಕೆಯನ್ನು ಏರಿದ್ದು, ಅದು 4:45ಕ್ಕೆ ಅನ್‌ಡಾಕ್ (ಐಎಸ್‌ಎಸ್‌ನಿಂದ ಬೇರ್ಪಡುವಿಕೆ) ಆಗಿದೆ ಹಾಗೂ ಭೂಮಿಯತ್ತ ಪಯಣ ಆರಂಭವಾಗಿದೆ. ಜುಲೈ 15ರ ಮಧ್ಯಾಹ್ನ 3 ಗಂಟೆಗೆ ನೌಕೆ ಭೂಸ್ಪರ್ಶ ಮಾಡಿದೆ. ಭಾರತೀಯ ವಾಯುಪಡೆಯ ಪೈಲಟ್ ಆಗಿರುವ ಗ್ರೂಪ್ ಕ್ಯಾಪ್ಟನ್ ಶುಕ್ಲಾ, 1984ರಲ್ಲಿ ವಿಂಗ್ ಕಮಾಂಡರ್ ರಾಕೇಶ್ ಶರ್ಮಾ ನಂತರ ಬಾಹ್ಯಾಕಾಶಕ್ಕೆ ಭೇಟಿ ನೀಡಿದ ಎರಡನೇ ಭಾರತೀಯ. ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಭೇಟಿ ನೀಡಿದ ಮೊದಲ ಭಾರತೀಯ ಇವರು.

## 7 ವರ್ಷ ಮತ್ತು ಮೇಲ್ಪಟ್ಟ ವಯಸ್ಸಿನ ಮಕ್ಕಳ ಬಯೋಮೆಟ್ರಿಕ್ ನವೀಕರಣ ಕಡ್ಡಾಯ: ಯುಐಡಿಎಐ

7 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ಮಕ್ಕಳಿಗೆ ಕಡ್ಡಾಯ ಬಯೋಮೆಟ್ರಿಕ್ ನವೀಕರಣವನ್ನು ಮಾಡುವಂತೆ ಪೋಷಕರನ್ನು ಭಾರತೀಯ ವಿಶಿಷ್ಟ ಗುರುತಿನ ಚೀಟಿ ಪ್ರಾಧಿಕಾರ (ಯುಐಡಿಎಐ) ಒತ್ತಾಯಿಸಿದೆ. ಪ್ರಸ್ತುತ ಮಾರ್ಗಸೂಚಿಗಳ ಪ್ರಕಾರ, ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಗು ಬೆಳವಣಿಗೆಯ ಕಾರಣಗಳಿಂದಾಗಿ ಬೆರಳಚ್ಚುಗಳು ಅಥವಾ ಐರಿಸ್ ಸ್ಕ್ಯಾನ್‌ಗಳನ್ನು ಒದಗಿಸಬೇಕಾಗಿಲ್ಲ ಎಂದು ಎಲೆಕ್ಟ್ರಾನಿಕ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ ತಿಳಿಸಿದೆ. ಮಗುವಿಗೆ ಐದು ವರ್ಷ ತುಂಬಿದ ನಂತರ, ಈ ಬಯೋಮೆಟ್ರಿಕ್‌ಗಳನ್ನು ನವೀಕರಿಸಬೇಕು ಮತ್ತು 5 ರಿಂದ 7 ವರ್ಷದೊಳಗಿನ ಪ್ರಕ್ರಿಯೆಯು ಉಚಿತವಾಗಿರುತ್ತದೆ ಎಂದು ಅದು ಹೇಳಿದೆ. ಅಸ್ತಿತ್ವದಲ್ಲಿರುವ ನಿಯಮಗಳ ಪ್ರಕಾರ, 7 ವರ್ಷದ ನಂತರವೂ ಕಡ್ಡಾಯ ಬಯೋಮೆಟ್ರಿಕ್ ನವೀಕರಣವನ್ನು ಪೂರ್ಣಗೊಳಿಸದಿದ್ದರೆ, ಆಧಾರ್ ಸಂಖ್ಯೆಯನ್ನು ನಿಷ್ಕ್ರಿಯಗೊಳಿಸಬಹುದು. ಕಡ್ಡಾಯ ಬಯೋಮೆಟ್ರಿಕ್ ನವೀಕರಣ ಕಾರ್ಯವನ್ನು ಪೂರ್ಣಗೊಳಿಸಲು ಯುಐಡಿಎಐ ಅಂತಹ ಮಕ್ಕಳ ಆಧಾರ್‌ನಲ್ಲಿ ನೋಂದಾಯಿಸಲಾದ ಮೊಬೈಲ್ ಸಂಖ್ಯೆಗಳಿಗೆ SMS ಸಂದೇಶಗಳನ್ನು ಕಳುಹಿಸಲು ಪ್ರಾರಂಭಿಸಿದೆ.

# ಇದು ಮೂವರು ಸ್ನೇಹಿತರ ಶ್ರಮದಿಂದ ಬೆಳಕು ಕಂಡ ನೂರಾರು ಗ್ರಾಮಗಳ ಕಥೆ

ಪ್ರೇರಣಾ

ಭಾರತದ ಅನೇಕ ಹಳ್ಳಿಗಳಲ್ಲಿ ಇಂದಿಗೂ ಕೇಂದ್ರೀಕೃತ ವಿದ್ಯುತ್ ಗ್ರಿಡ್‌ಗಳನ್ನು ತಲುಪಿಸಲು ಸಾಧ್ಯವಿಲ್ಲ. ಈ ದುರಸ್ಥ ಪ್ರದೇಶಗಳಿಗೆ ಇಂಧನ ನೀಡುವಲ್ಲಿ ಸೌರ ಮೈಕ್ರೋಗ್ರಿಡ್‌ಗಳು ಪ್ರಮುಖ ಪಾತ್ರವಹಿಸುತ್ತಿವೆ. ಸುಮಾರು 150 ದೂರದ ಹಳ್ಳಿಗಳಿಗೆ ಗ್ರಾಮ್ ಊರ್ಜಾ ಎಂಬ ಸಂಸ್ಥೆಯು ಈ ಪರಿಕಲ್ಪನೆಯನ್ನು ಪ್ರಾಯೋಗಿಕವಾಗಿ ರೂಪಿಸಿ, ಜಾರ್ಖಂಡ್, ಮಹಾರಾಷ್ಟ್ರ ಮುಂತಾದ ರಾಜ್ಯಗಳಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳಿಸಿದೆ. ಈ ಸಂಸ್ಥೆಯನ್ನು ಸಮೀರ್ ನಾಯರ್, ಅಂಶುಮಾನ್ ಲಾತ್ ಮತ್ತು ಪ್ರಸಾದ್ ಕುಲಕರ್ಣಿ ಎಂಬ ಮೂವರು ಸ್ನೇಹಿತರು ವಿದ್ಯುತ್ ಸಂಪರ್ಕವಿಲ್ಲದ ಹಳ್ಳಿಗಳಲ್ಲಿ ಬೆಳಕು ತರುವ ಕನಸಿನಿಂದ ಆರಂಭಿಸಿದರು. 2008ರಲ್ಲಿ ಇಂಧನ ಪ್ರವೇಶದ ಕೊರತೆ ಬಗ್ಗೆ ತೀವ್ರವಾದ ಕಳವಳ ಹೊಂದಿದ್ದ ಇವರು, 2015 ರಲ್ಲಿ "ಗ್ರಾಮ್ ಊರ್ಜಾ" ಸಂಸ್ಥೆಯನ್ನು ಸ್ಥಾಪಿಸಿದರು. ಇಂಧನದ ಮೂಲಕ ಹಳ್ಳಿಗಳಲ್ಲಿ ಬೆಳಕು ತರಬೇಕು ಎಂಬ ಅವರ ಗುರಿ ಸ್ಪಷ್ಟವಾಗಿತ್ತು.

ಇವರ ಪರಿಹಾರ ಸೌರ ಮೈಕ್ರೋಗ್ರಿಡ್ ವ್ಯವಸ್ಥೆಯಾಗಿತ್ತು. ಇದು ಸೂರ್ಯನ ಶಕ್ತಿಯನ್ನು ಬಳಸಿ ವಿದ್ಯುತ್ ಉತ್ಪತ್ತಿ ಮಾಡುವ ಸ್ಥಳೀಯ ಶಕ್ತಿ ಘಟಕವಾಗಿದ್ದು, ಗ್ರಿಡ್ ಸಂಪರ್ಕವಿಲ್ಲದ ಹಳ್ಳಿಗಳಿಗಾಗಿ ಇದು ಅತ್ಯುತ್ತಮ ಆಯ್ಕೆಯಾಗಿದೆ. ಗ್ರಾಮೀಣ ಪರಿಸರದ ಜನರ ಜೀವನವನ್ನು ಸುಧಾರಿಸಲು ಈ ವ್ಯವಸ್ಥೆಗಳು ನೆರವಾಗುತ್ತಿವೆ ಅಂದರೆ ಬೀದಿ ದೀಪ, ಮನೆ ವಿದ್ಯುತ್, ಸೌರ ಪಂಪ್ ಮತ್ತು ಜೈವಿಕ ಅನಿಲ ಅಡುಗೆ ವ್ಯವಸ್ಥೆಗಳನ್ನು ಹೊಂದಿರುವ ಈ ತಂತ್ರಜ್ಞಾನ ಅನೇಕ ದಿಕ್ಕುಗಳಲ್ಲಿ ಪರಿಣಾಮವನ್ನು ಬೀರುತ್ತಿದೆ. ಈ ವಿಕೇಂದ್ರೀಕೃತ ವ್ಯವಸ್ಥೆಯ ಮೈಕ್ರೋಗ್ರಿಡ್‌ಗಳು ಒಂದು ಹಳ್ಳಿಗೆ ಅಥವಾ ಸಮುದಾಯಕ್ಕೆ ಮಾತ್ರ ಸೇವೆ ನೀಡುತ್ತವೆ. ಸೌರ ಫಲಕ, ಬ್ಯಾಟರಿ, ಪಂಪ್ ಇತ್ಯಾದಿಗಳ ಸಹಾಯದಿಂದ ಸ್ಥಳೀಯ ಮಟ್ಟದಲ್ಲಿ ಶಕ್ತಿಯನ್ನು ಉತ್ಪಾದಿಸುತ್ತವೆ. ಈ ಗ್ರಿಡ್‌ಗಳು ಕೇವಲ ವಿದ್ಯುತ್ ನೀಡುವುದಲ್ಲದೆ, ಜನರಲ್ಲಿನ ಅಂಧಕಾರದ ಭಯವನ್ನು ದೂರ ಮಾಡುತ್ತವೆ. ಆರೋಗ್ಯ ಮತ್ತು ಸುರಕ್ಷತೆಯ ಭರವಸೆಯನ್ನುಂಟುಮಾಡುವುದರ ಜೊತೆಗೆ ಜನರಿಗೆ ಅತ್ಯಂತ ಅನುಕೂಲಕಾರಿಯಾಗಿ ಸಹಾಯಕವಾಗುತ್ತದೆ. ಇವರ ಈ ವಿದ್ಯುತ್ ಆರಂಭದಿಂದ ಜಾರ್ಖಂಡ್‌ನ ಸಿಮ್ಡೆಗಾ ಜಿಲ್ಲೆಯಲ್ಲಿ ಮೈಕ್ರೋಗ್ರಿಡ್‌ಗಳ ಅನುಷ್ಠಾನದಿಂದ ಗ್ರಾಮಗಳ ಬೀದಿಗೆ ಬೆಳಕು ಬಂದಿದೆ. ಹಾವು ಮತ್ತು ಪ್ರಾಣಿಗಳ ಹಾನಿಯಿಂದ ಮುಕ್ತಿಯನ್ನೂ ಹೊಂದಿದ್ದಾರೆ. ಮಕ್ಕಳ ಅಧ್ಯಯನಕ್ಕೆ ಉತ್ತಮ ಪರಿಸರ ಲಭಿಸಿದ್ದು, ಮಹಿಳೆಯರೂ ಇಂಧನ ಸಮಿತಿಗಳಲ್ಲಿ ಭಾಗವಹಿಸುತ್ತಿದ್ದಾರೆ.

ಅಷ್ಟೇ ಅಲ್ಲದೆ ಇವರ ಈ ಗ್ರಿಡ್‌ಗಳಿಂದ ಮಹಾರಾಷ್ಟ್ರದ ರೈತ ಅಂಬಾದಾಸ್ ಭೋಯೆಯಂತಹವರಿಗೆ ಸೌರ ಪಂಪ್‌ಗಳು ದೀರ್ಘಕಾಲಿಕ ಪರಿಹಾರವಾಗಿ ಮಾರ್ಪಟ್ಟಿವೆ. ನೀರಾವರಿ ವ್ಯವಸ್ಥೆ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವುದರಿಂದ ಅವರು ಮಳೆಗಾಲದ ಹೊರತಾದರೂ ಹಲವು ಬೆಳೆಗಳನ್ನು ಬೆಳೆಸಲು ಸಾಧ್ಯವಾಗಿದೆ. ವಲಸೆ ಕೆಲಸದ ಅವಶ್ಯಕತೆಯು ಇಲ್ಲವಾಗಿದೆ. ಇವರಷ್ಟೇ ಅಲ್ಲದೆ ಜಾರ್ಖಂಡ್‌ನ ಗುಮ್ಲಾ ಜಿಲ್ಲೆಯ ಪುಷ್ಪಾ ರಾಥೋಡ್ ಅವರ ಬದುಕು ಈ ಬದಲಾವಣೆಗೆ ಸಾಕ್ಷಿಯಾಗಿದೆ. ಈ ಮೂರು ಸ್ನೇಹಿತರ ಮೈಕ್ರೋಗ್ರಿಡ್‌ಗಳ ಸ್ಥಾಪನೆಯ ನಂತರ ಅವರ ತಮ್ಮ ಮಕ್ಕಳಿಗೆ ಅಧ್ಯಯನ ಮಾಡಲು ವಿದ್ಯುತ್ ಲಭಿಸುತ್ತಿದೆ, ಬೀದಿಯಲ್ಲಿ ಸುರಕ್ಷಿತವಾಗಿ ಸಂಚರಿಸಬಹುದು ಎಂಬುದನ್ನು ತಿಳಿಸಿದ್ದಾರೆ. ಹೀಗೆ ಹತ್ತಾರು ಹಳ್ಳಿಗಳಿಗೆ ವಿದ್ಯುತ್ ಸಂಪರ್ಕವನ್ನು ಯಶಸ್ವಿಯಾಗಿ ಒದಗಿಸಿ ಕೊಡುವಲ್ಲಿ ಮೂವರು ಸ್ನೇಹಿತರು ತಮಗಾದಷ್ಟು ರೀತಿಯಲ್ಲಿ ದುಡಿದಿದ್ದಾರೆ. ಗ್ರಾಮ್ ಊರ್ಜಾ, ಈ ತಂತ್ರಜ್ಞಾನವನ್ನು ಕೇವಲ ಸ್ಥಾಪನೆಗಷ್ಟೇ ಸೀಮಿತಗೊಳಿಸದೆ, ನಿರ್ವಹಣಾ ಹೊಣೆಗಾರಿಕೆಯನ್ನು ಗ್ರಾಮಸ್ಥರ ಕೈಗೆ ಒಪ್ಪಿಸಿವೆ. ಪ್ರತಿಯೊಂದು ಮನೆಯು ಮಾಸಿಕ ಶಕ್ತಿ ಸುಂಕವನ್ನು ಪಾವತಿಸುತ್ತಿದ್ದು, ಗ್ರಿಡ್ ನಿರ್ವಹಣೆಯಲ್ಲಿ ನೇರವಾಗಿ ತೊಡಗಿಕೊಂಡಿದ್ದಾರೆ. ಇದರಿಂದ ಭಾಗವಹಿಸುವಿಕೆಯ ಆಡಳಿತ ಹಾಗೂ ದೀರ್ಘಕಾಲಿಕ ಸ್ಥಿರತೆಯು ಸಾಧ್ಯವಾಗಿದೆ.



ಈ ಇಂಧನ ಪ್ರಕ್ರಿಯೆಯ ಪರಿಣಾಮವಾಗಿ, ಗ್ರಾಮೀಣ ಆರ್ಥಿಕತೆಯಲ್ಲಿ ಹೊಸ ಚೈತನ್ಯ ಉಂಟಾಗಿದೆ. ಕೃಷಿ ಸಂಸ್ಕರಣೆ, ಬಿಸಿಯೂಟ ಯೋಜನೆ, ಮತ್ತು ಸಣ್ಣ ಕೈಗಾರಿಕೆಗಳಿಗೆ ಸಹ ಶಕ್ತಿಯ ರೂಪವೂ ಲಭ್ಯವಿದೆ. ಇದು ಗ್ರಾಮೀಣ ಜೀವನದ ಗುಣಮಟ್ಟವನ್ನು ಉನ್ನತಮಟ್ಟಕ್ಕೆ ತಂದಿದೆ. ಮಹಾರಾಷ್ಟ್ರ ಮತ್ತು ಜಾರ್ಖಂಡ್‌ನ ಹಳ್ಳಿಗಳಲ್ಲಿ 770 ಸೌರ ಪಂಪ್‌ಗಳನ್ನು ಸ್ಥಾಪಿಸಲಾಗಿದೆ. ಜೊತೆಗೆ ಇದು 4,200ಕ್ಕೂ ಹೆಚ್ಚು ರೈತರಿಗೆ ವರದಾನವಾಗಿದೆ ಮತ್ತು ಮಾನ್ಸೂನ್ ನಂತರ ನೀರಾವರಿ ಮಾಡದ 4,500 ಎಕರೆಗಳಿಗೂ ಹೆಚ್ಚು ಭೂಮಿಗೆ ನೀರುಣಿಸಲು ಸಹಾಯ ಮಾಡುತ್ತದೆ.

ಇವರ ಈ ಗ್ರಾಮ್ ಊರ್ಜಾದ ಮಾದರಿ ತಾತ್ಕಾಲಿಕ ಪರಿಹಾರವಲ್ಲ. ಇದು ಒಂದು ದೀರ್ಘಕಾಲಿಕ, ಸಮುದಾಯ ಆಧಾರಿತ ಶಕ್ತಿ ಪರಿಕಲ್ಪನೆಯಾಗಿದೆ. ಸೌಲಭ್ಯವಿಲ್ಲದ ಹಳ್ಳಿಗಳಲ್ಲಿ ಶಕ್ತಿ ಪ್ರವೇಶವು ಜೀವನಮೌಲ್ಯವನ್ನೇ ರೂಪಿಸಬಹುದೆಂಬುದನ್ನು ಸಂಸ್ಥೆಯ ಮಾಲೀಕರಾದ ಸಮೀರ್ ನಾಯರ್, ಅಂಶುಮಾನ್ ಲಾತ್ ಮತ್ತು ಪ್ರಸಾದ್ ಕುಲಕರ್ಣಿ ಅವರು ತಮ್ಮ ಸಾಧನೆಯ ಮೂಲಕ ಸ್ಪಷ್ಟಪಡಿಸಿದ್ದಾರೆ.

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.vskkarnataka.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 25th JULY 2025

REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2024-2026 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2024-26

FORTNIGHTLY 01-08-2025



## ಯುಕೆ ಸಂಸತ್ತಿನಲ್ಲಿ ಮೊದಲ ಬಾರಿಗೆ ಹನುಮಾನ್ ಚಾಲೀಸಾ ಪಠಣ

ಬಾಗೇಶ್ವರ ಧಾಮದ ಪಂಡಿತ್ ಧೀರೇಂದ್ರ ಕೃಷ್ಣ ಶಾಸ್ತ್ರಿ ಇತ್ತೀಚೆಗೆ ಯುಕೆ ಸಂಸತ್ತಿಗೆ ಭೇಟಿ ನೀಡಿದ್ದು, ಈ ವೇಳೆ ಹನುಮಾನ್ ಚಾಲೀಸಾದ ಶ್ಲೋಕಗಳನ್ನು ಪಠಿಸಲಾಯಿತು. ಯುಕೆ ಸಂಸತ್ತಿನಲ್ಲಿ ಹನುಮಾನ್ ಚಾಲೀಸಾ ಪಠಿಸಿದ್ದು ಇದೇ ಮೊದಲು. ಜನರು ಒಟ್ಟಾಗಿ ಶ್ಲೋಕಗಳನ್ನು ಹಾಡುವ ವೀಡಿಯೊವನ್ನು ಬಾಗೇಶ್ವರ ಧಾಮದ ಎಕ್ಸ್ ಹ್ಯಾಂಡಲ್ ಹಂಚಿಕೊಂಡಿದೆ. ಪಂಡಿತ್ ಧೀರೇಂದ್ರ ಕೃಷ್ಣ ಶಾಸ್ತ್ರಿ ಅವರ



ಸಮ್ಮುಖದಲ್ಲಿ ಹಲವಾರು ಜನರು, ಅಧಿಕಾರಿಗಳು ಮತ್ತು ಶಾಸಕರು ಕಣ್ಣು ಮುಚ್ಚಿ ಶ್ಲೋಕಗಳನ್ನು ಪಠಿಸುತ್ತಿರುವುದು ಕಂಡುಬಂದಿದೆ. ಲಂಡನ್ ಸಂಸತ್ತಿನ ಇತಿಹಾಸದಲ್ಲಿ ಮೊದಲ ಬಾರಿಗೆ ಸರ್ಕಾರದಿಂದ ಶ್ರೀ ಹನುಮಾನ್ ಚಾಲೀಸಾ ಪಠಣ ಸಂಸತ್ತಿನಲ್ಲಿ ಹಾಜರಿದ್ದ ಎಲ್ಲಾ ಅತಿಥಿಗಳು ಭಕ್ತಿಯಿಂದ ಪಠಿಸಿದರು ಎಂದು ಬಾಗೇಶ್ವರ ಧಾಮ್ ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ವರದಿಯ ಪ್ರಕಾರ, ಬ್ರಿಟಿಷ್ ಸಂಸತ್ತಿನಲ್ಲಿ ಭಾರತೀಯ ಧಾರ್ಮಿಕ ಪಠ್ಯವನ್ನು ಪಠಿಸಿದ್ದು ಇದೇ ಮೊದಲು.

## ಎಲ್ಲರ ಸುಖಕ್ಕಾಗಿ ಪ್ರಾರ್ಥಿಸುವುದು ಹಿಂದೂಗಳ ಮೂಲಭೂತ ವಿಚಾರಧಾರೆ: ವಿ. ಶಾಂತಾಕುಮಾರಿ




ನಾಗ್ಪುರ : ಇಡೀ ವಿಶ್ವದ ಕಲ್ಯಾಣವನ್ನು ಬಯಸುತ್ತಾ, ಎಲ್ಲರ ಸುಖಕ್ಕಾಗಿ ಪ್ರಾರ್ಥಿಸುವುದು ಹಿಂದೂಗಳ ಮೂಲಭೂತ ವಿಚಾರವಾಗಿದೆ. ಭಾರತದ ಶ್ರೇಷ್ಠ ಇತಿಹಾಸ ಹಾಗೂ ಪರಂಪರೆಯು ಇದರ ದ್ಯೋತಕವಾಗಿದೆ. ಭಾರತೀಯ ಸ್ವತ್ವದ ಆಧಾರದ ಮೇಲೆ ನಾವು ನಮ್ಮ ಜೀವನವನ್ನು ರೂಪಿಸಿಕೊಳ್ಳಬೇಕು ಎಂದು ರಾಷ್ಟ್ರ ಸೇವಿಕಾ ಸಮಿತಿಯ ಪ್ರಮುಖ ಸಂಚಾಲಿಕಾ ವಿ.ಶಾಂತಾಕುಮಾರಿ ಹೇಳಿದರು. ರೇಶಿಂಭಾಗ್‌ನ ಸ್ಮೃತಿ ಮಂದಿರದಲ್ಲಿ ಜುಲೈ 17ರಿಂದ 20, 2025ರವರೆಗೆ ನಡೆದ ರಾಷ್ಟ್ರ ಸೇವಿಕಾ ಸಮಿತಿಯ ಅಖಿಲ ಭಾರತೀಯ ಕಾರ್ಯಕಾರಿಣಿ ಹಾಗೂ ಪ್ರತಿನಿಧಿ ಸಭೆಯ ಸಮಾರೋಪ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮುಂಬರುವ 2026 ನೇ ಇಸವಿಯಲ್ಲಿ ರಾಷ್ಟ್ರ ಸೇವಿಕಾ ಸಮಿತಿಯ ಸ್ಥಾಪನೆಯಾಗಿ 90 ವರ್ಷಗಳು ಪೂರ್ಣಗೊಳ್ಳಲಿದೆ.ಈ ಸಂದರ್ಭದಲ್ಲಿ, ಪ್ರತಿನಿಧಿ ಸಭೆಯಲ್ಲಿ ಕಾರ್ಯ ವಿಸ್ತರಣೆಯ ಯೋಜನೆಯನ್ನು ರೂಪಿಸಲಾಯಿತು. ಯುವಕರಲ್ಲಿ ಹೆಚ್ಚುತ್ತಿರುವ ಮಾದಕ ವ್ಯಸನ – ಒಂದು ಗಂಭೀರ ಬಿಕ್ಕಟ್ಟು" ಎಂಬ ವಿಷಯದ ಕುರಿತು ಪ್ರತಿನಿಧಿ ಸಭೆಯು ನಿರ್ಣಯವನ್ನು ಅಂಗೀಕರಿಸಿತು ಎಂದರು. ಈ ಸಭೆಯಲ್ಲಿ 38 ಪ್ರಾಂತಗಳಿಂದ 411 ಪ್ರತಿನಿಧಿಗಳು ಉಪಸ್ಥಿತರಿದ್ದರು.

## "ಮತಾಂತರ ಚಟುವಟಿಕೆ ಸಮಾಜ ವಿರೋಧಿ ಮಾತ್ರವಲ್ಲ, ರಾಷ್ಟ್ರ ವಿರೋಧಿ": ಯೋಗಿ ಆದಿತ್ಯನಾಥ್

ದೊಡ್ಡ ಪ್ರಮಾಣದ ಧಾರ್ಮಿಕ ಮತಾಂತರ ದಂಧೆಯ ಪ್ರಮುಖ ಆರೋಪಿ ಜಮಾಲುದ್ದೀನ್ ಅಲಿಯಾಸ್ ಛಂಗೂರ್ ಬಾಬಾನ ಚಟುವಟಿಕೆಗಳನ್ನು "ಸಮಾಜ ವಿರೋಧಿ ಮಾತ್ರವಲ್ಲ, ರಾಷ್ಟ್ರ ವಿರೋಧಿ" ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಘೋಷಿಸಿದ್ದಾರೆ. ಉತ್ತರ ಪ್ರದೇಶ ಸರ್ಕಾರವು ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಿಸಿದಂತೆ ಯಾವುದೇ ಸಡಿಲತೆಯನ್ನು ಸಹಿಸುವುದಿಲ್ಲ. ಆರೋಪಿ ಮತ್ತು ಅವನ ಗ್ಯಾಂಗ್ ಸದಸ್ಯರ ಎಲ್ಲಾ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ ಮತ್ತು ಅವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ" ಎಂದು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಫಿನಲ್ಲಿ ಪೋಸ್ಟ್ ಮಾಡಿದ್ದಾರೆ, "ಸಹೋದರಿಯರು ಮತ್ತು ಹೆಣ್ಣುಮಕ್ಕಳ ಘನತೆ ಮತ್ತು ಸುರಕ್ಷತೆ"ಗೆ ತಮ್ಮ ಸರ್ಕಾರದ ಬದ್ಧತೆಯನ್ನು ಒತ್ತಿ ಹೇಳಿದರು. ಬಲರಾಂಪುರ ಜಿಲ್ಲೆಯ ಮಾಧಪುರದ ಜಮಾಲುದ್ದೀನ್ ಮತ್ತು ಅವನ ಸಹಾಯಕಿ ನೀತು ಅಲಿಯಾಸ್ ನಸ್ರೀನ್ ಅವರನ್ನು ಉತ್ತರ ಪ್ರದೇಶ ಪೊಲೀಸರ ಭಯೋತ್ಪಾದನಾ ನಿಗ್ರಹ ದಳ ಬಂಧಿಸಿದೆ. ಪೊಲೀಸ್ ಮೂಲಗಳು ಜಮಾಲುದ್ದೀನ್ ಹಲವಾರು ಸಮುದಾಯಗಳ ಹುಡುಗಿಯರನ್ನು ಗುರಿಯಾಗಿಸಿಕೊಂಡಿದ್ದ ಮತ್ತು ಮತಾಂತರಕ್ಕಾಗಿ ದರ ಪಟ್ಟಿಯನ್ನು ಹಾಕಿದ್ದ ಎಂದು ಬಹಿರಂಗಗೊಂಡಿದೆ. ಇದು ಯುಪಿ ರಾಜ್ಯಾದ್ಯಂತ ವ್ಯಾಪಕ ಆಕ್ರೋಶಕ್ಕೆ ಕಾರಣವಾಗಿದೆ. ಪೊಲೀಸರು ಲಕ್ನೋದ ಗೋಮ್ತಿನಗರ ಪೊಲೀಸ್ ಠಾಣೆಯಲ್ಲಿ ಭಾರತೀಯ ದಂಡ ಸಂಹಿತೆ ಮತ್ತು ಉತ್ತರ ಪ್ರದೇಶ ಕಾನೂನುಬಾಹಿರ ಧಾರ್ಮಿಕ ಮತಾಂತರ ನಿಷೇಧ ಕಾಯ್ದೆ, 2021 ರ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಿದ್ದರು. ಜಮಾಲುದ್ದೀನ್‌ಗೆ ಮರಣದಂಡನೆ ವಿಧಿಸಬೇಕೆಂದು ಉತ್ತರ ಪ್ರದೇಶ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಬಬಿತಾ ಚೌಹಾಣ್ ಒತ್ತಾಯಿಸಿದ್ದಾರೆ, ಅವರ ಕ್ರಮಗಳನ್ನು "ಯೋಜಿತ ಪಿತೂರಿ" ಎಂದು ಬಣ್ಣಿಸಿದ್ದಾರೆ ಮತ್ತು "ನಮ್ಮ ಹೆಣ್ಣುಮಕ್ಕಳು ಬಲವಂತದ ಮತಾಂತರದ ವಿಷಕಾರಿ ಸಿದ್ಧಾಂತದ ಪರೀಕ್ಷಾ ಪ್ರಯೋಗಾಲಯಗಳಲ್ಲ" ಎಂದು ಘೋಷಿಸಿದ್ದಾರೆ. ಜುಲೈ 7 ಲಕ್ನೋದಲ್ಲಿ ಬಿಡುಗಡೆ ಮಾಡಿದ ಅಧಿಕೃತ ಹೇಳಿಕೆಯಲ್ಲಿ, ಹುಡುಗಿಯರನ್ನು ವಂಚಿಸುವವರು ಮತ್ತು ಅವರ ನಂಬಿಕೆಯನ್ನು ದೋಚುವವರು ಸಮಾಜದ ಶತ್ರುಗಳು ಮತ್ತು ಅಂತಹ ಅಪರಾಧಿಗಳು ಮರಣದಂಡನೆಗಿಂತ ಕಡಿಮೆ ಶಿಕ್ಷೆ ಅನುಭವಿಸಬಾರದು ಎಂದು ಅವರು ಪ್ರತಿಪಾದಿಸಿದ್ದಾರೆ.

## ಆಪರೇಷನ್ ಸಿಂಧೂರ್ ಬಳಿಕ ಭಾರತದ ದೇಶೀಯ ರಕ್ಷಣಾ ಉಪಕರಣಗಳಿಗೆ ಬೇಡಿಕೆ ಹೆಚ್ಚಿದೆ: ರಾಜನಾಥ್



ಇತ್ತೀಚಿನ ಆಪರೇಷನ್ ಸಿಂಧೂರ್ ಸಮಯದಲ್ಲಿ ಪ್ರದರ್ಶಿಸಲಾದ ಭಾರತದ ದೇಶೀಯ ಉಪಕರಣಗಳ ಸಾಮರ್ಥ್ಯವು ಅದರ ರಕ್ಷಣಾ ಸ್ಥಳೀಯ ಉತ್ಪನ್ನಗಳಿಗೆ ಜಾಗತಿಕ ಬೇಡಿಕೆಯನ್ನು ಹೆಚ್ಚಿಸಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ. ನವದೆಹಲಿಯಲ್ಲಿ ಮಾತನಾಡಿದ ಸಿಂಗ್, ಭಾರತದ ರಕ್ಷಣಾ ಕೈಗಾರಿಕೆಗಳು ಅಪಾರ ಸಾಧ್ಯತೆಗಳನ್ನು ಹೊಂದಿವೆ ಎಂದರು. ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಭಾರತ ರಕ್ಷಣಾ ವಲಯದಲ್ಲಿ ಸ್ವಾವಲಂಬನೆಯನ್ನು ಬಹುತೇಕ ಸಾಧಿಸಿದೆ ಎಂದರು. ಹಿಂದೆ ವಿದೇಶಗಳಿಂದ ಆಮದು ಮಾಡಿಕೊಳ್ಳಲಾಗುತ್ತಿದ್ದ ಹೆಚ್ಚಿನ ರಕ್ಷಣಾ ಉಪಕರಣಗಳನ್ನು ಈಗ ದೇಶದಲ್ಲಿಯೇ ತಯಾರಿಸಲಾಗುತ್ತಿದೆ ಎಂದು ಅವರು ಹೇಳಿದರು. ಮರು ಶಸ್ತ್ರಾಸ್ತ್ರ ಮತ್ತು ಸಂಬಂಧಿತ ಹೂಡಿಕೆಗಳು ವೇಗವಾಗಿ ಹೆಚ್ಚುತ್ತಿರುವ ಇಂದಿನ ಯುಗದಲ್ಲಿ ರಕ್ಷಣಾ ಆರ್ಥಿಕತೆಯ ಬಗ್ಗೆ ಸಚಿವರು ಒತ್ತು ನೀಡಿದರು. ಇಂದು, ಯುಎಸ್‌ಎ ಮತ್ತು ಯುರೋಪಿಯನ್ ರಾಷ್ಟ್ರಗಳು ಸೇರಿದಂತೆ ಬಹುತೇಕ ಎಲ್ಲಾ ಪ್ರಮುಖ ದೇಶಗಳು ತಮ್ಮ ರಕ್ಷಣಾ ವೆಚ್ಚವನ್ನು ವೇಗವಾಗಿ ಹೆಚ್ಚಿಸುತ್ತಿವೆ ಎಂದು ಸಿಂಗ್ ಹೇಳಿದರು. ಇಂದು, ಭಾರತ ಸೇರಿದಂತೆ ಇಡೀ ಜಗತ್ತು ಮರು ಸಶಸ್ತ್ರೀಕರಣದ ಹೊಸ ಹಂತದ ಮೂಲಕ ಸಾಗುತ್ತಿದೆ ಎಂದು ಅವರು ಹೇಳಿದರು. ರಕ್ಷಣಾ ಸಚಿವಾಲಯದ ಬಜೆಟ್ ದೇಶದಲ್ಲಿಯೇ ಅತ್ಯಧಿಕವಾಗಿದೆ ಎಂದು ಸಿಂಗ್ ಎತ್ತಿ ತೋರಿಸಿದರು. ಇತ್ತೀಚೆಗೆ ಸರ್ಕಾರ ಸಂಶೋಧನೆ, ಅಭಿವೃದ್ಧಿ ಮತ್ತು ನಾವೀನ್ಯತೆ (ಆರ್‌ಡಿಐ) ಯೋಜನೆಯನ್ನು ಅನುಮೋದಿಸಿದೆ ಎಂದ ಅವರು, ಒಂದು ಲಕ್ಷ ಕೋಟಿ ರೂಪಾಯಿಗಳ ನಿಧಿಯನ್ನು ಹೊಂದಿರುವ ಈ ಯೋಜನೆಯು ಉನ್ನತ ಮಟ್ಟದ ಯೋಜನೆಗಳನ್ನು ಉತ್ತೇಜಿಸುವುದು ಮತ್ತು ನಿರ್ಣಾಯಕ ತಂತ್ರಜ್ಞಾನಗಳನ್ನು ಸಾಧಿಸುವ ಗುರಿಯನ್ನು ಹೊಂದಿದೆ. ಅಲ್ಲಿ ರಕ್ಷಣಾ ವಲಯಕ್ಕೂ ಆದ್ಯತೆ ನೀಡಲಾಗಿದೆ ಎಂದರು.

## ಭಾರತೀಯ ನೌಕಾಪಡೆಗೆ ಮತ್ತಷ್ಟು ಬಲ ತುಂಬಿದ INS ನಿಸ್ತಾರ್



ಭಾರತೀಯ ನೌಕಾಪಡೆಯ ಹೊಸ ಹೆಮ್ಮೆ ಐಎನ್‌ಎಸ್ ನಿಸ್ತಾರ್. ವಿಶಾಖಪಟ್ಟಣದಲ್ಲಿ ನಡೆದ ಕಾರ್ಯಕ್ರಮದ ಸಂದರ್ಭದಲ್ಲಿ ಇದನ್ನು ಭಾರತೀಯ ನೌಕಾಪಡೆಗೆ ಹಸ್ತಾಂತರಿಸಲಾಯಿತು. ಇದು ಭಾರತೀಯ ನೌಕಾಪಡೆಯ ಮೊತ್ತ ಮೊದಲ ಸ್ಥಳೀಯ ಡೈವಿಂಗ್ ಬೆಂಬಲ ಹಡಗು. ಐಎನ್‌ಎಸ್ ನಿಸ್ತಾರ್ ಎಂದು ಹೆಸರಿಸಲಾಗಿರುವ ಇದನ್ನು, ಹಿಂದೂಸ್ತಾನ್ ಶಿಪ್‌ಯಾರ್ಡ್ ಲಿಮಿಟೆಡ್ ನಿರ್ಮಿಸಿದೆ. ವಿಶ್ವದ ಕೆಲವೇ ನೌಕಾಪಡೆಗಳು ಮಾಡಲು ಸಾಧ್ಯವಾಗುವ ಆಳ ಸಮುದ್ರಗಳಲ್ಲಿನ ಡೈವಿಂಗ್ ಮತ್ತು ರಕ್ಷಣೆಯಂತಹ ಕಷ್ಟಕರವಾದ ಕೆಲಸಗಳನ್ನು ಮಾಡುವುದು ಇದರ ಕೆಲಸ. ಐಎನ್‌ಎಸ್ ನಿಸ್ತಾರ್ ಕೇವಲ ಒಂದು ಹಡಗು ಅಲ್ಲ, ಅದು ಒಂದು ದೊಡ್ಡ ಶಕ್ತಿ. ಈ ಹಡಗು ನಮ್ಮ ನೌಕಾಪಡೆಗೆ ಮಾತ್ರವಲ್ಲದೆ ನಮ್ಮ ನೆರೆಯ ರಾಷ್ಟ್ರಗಳಿಗೂ ಜಲಾಂತರ್ಗಾಮಿ ನೌಕೆಗಳ ರಕ್ಷಣೆಯಲ್ಲಿ ಸಹಾಯ ಮಾಡುತ್ತದೆ. ಆ ಮೂಲಕ ಇದು ಭಾರತವನ್ನು, ಈ ವಿಚಾರದಲ್ಲಿ ವಿಶ್ವಾಸಾರ್ಹ ಪಾಲುದಾರನನ್ನಾಗಿ ಮಾಡುತ್ತದೆ. ಈ ಹಡಗು 120 ಮೀಟರ್ ಉದ್ದವಿದೆ. ಇದರ ತೂಕ ಸುಮಾರು 10,000 ಟನ್‌ಗಳು. ಇದು ರಿಮೋಟ್ ಕಂಟ್ರೋಲ್ಡ್ ವಾಹನಗಳು, ವಿಶೇಷವಾಗಿ ಲೈಫ್ ಬೋಟ್‌ಗಳು ಮತ್ತು ಡೈವಿಂಗ್ ಚೇಂಬರ್‌ಗಳಂತಹ ಆಧುನಿಕ ಉಪಕರಣಗಳನ್ನು ಹೊಂದಿದೆ. ಇದು 300 ಮೀಟರ್ ಆಳ ಸಮುದ್ರದಲ್ಲಿ ಚಾಲನೆ ಮತ್ತು ರಕ್ಷಣಾ ಕಾರ್ಯಗಳನ್ನು ಮಾಡಬಹುದು. ಇದರ ವಿಶಾಲವಾದ ಡೆಕ್ ಒಂದು ಜೋಡಿ – DSRV ಅಂದರೆ Deep Submergence Rescue Vehicle ಅನ್ನು ಹೊಂದಿದೆ. ಯಾವುದೇ ಜಲಾಂತರ್ಗಾಮಿ ತೊಂದರೆಯಲ್ಲಿ ಸಿಲುಕಿಕೊಂಡರೆ, ರಕ್ಷಣೆಗೆ ಇದನ್ನು ಬಳಸಬಹುದು. ಸೋನಾರ್‌ಗಳು, ಕ್ಯಾಮೆರಾಗಳು ಮತ್ತು ಮ್ಯಾನಿಪ್ಯುಲೇಟರ್‌ಗಳನ್ನು ಹೊಂದಿದ ರಿಮೋಟ್ ಚಾಲಿತ ವಾಹನಗಳು – ROVಗಳನ್ನೂ ಇದು ಹೊಂದಿದೆ. ಇವು ನೀರೊಳಗಿನ ಹಾನಿಯನ್ನು ನಿರ್ಣಯಿಸಲು, ಅವಶೇಷಗಳನ್ನು ತೆರವುಗೊಳಿಸಲು ಅಥವಾ DSRVಗೆ ಮಾರ್ಗದರ್ಶನ ಮಾಡಲು ಪೂರ್ಣ ಒಂದು ಕಿಲೋಮೀಟರ್‌ಗಳಷ್ಟು ಕೆಳಗೆ ಇಳಿಯಬಹುದು.

ಓದುಗರೇ ಗಮನಿಸಿ
ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021